ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 33 ಅಕ್ಟೋಬರ್ 28, 1979 40 ಪೈಸೆ

ಪಟಾಕಿ ದುರಂತ

ಬೆಂಗಳೂರು ನಗರದ ಕೃಷ್ಣರಾಜೇಂದ್ರ ಮಾರುಕಟ್ಟೆ ಪ್ರದೇಶದಲ್ಲಿ ಅಕ್ಟೋಬರ್ 19 ಏಸಿದ ಭೀಕರ ಅಗ್ನಿದುರಂತದಲ್ಲಿ ಅಧಿಕೃತ ವಾರ್ತೆ ಪ್ರಕಾರ ಇಪ್ಪತ್ತನಾಲ್ಕು ಜನರು ಸತ್ತಿದ್ದಾರೆ. ಪಟಾಕಿ ಅಂಗಡಿಯೊಂದರಲ್ಲಿ ಬಿದ್ದ ಬೆಂಕಿಯಿಂದ ಈ ಅನಾಹುತ ಸಂಭವಿಸಿದೆಯೆಂದು ಊಹಿಸಲಾಗಿದೆ. ಪಟಾಕಿ ದುರಂತದಿಂದ ನಗರದ ಮಧ್ಯಭಾಗದಲ್ಲಿ ಅಂಗಡಿ ಮತ್ತು ಸ್ವತ್ತುಗಳು ನಾಶವಾಗಿ, ಇಪ್ಪತ್ತನಾಲ್ಕು ಜನ ಸತ್ತಿದ್ದರೂ ನಗರದ ಉಳಿದೆಡೆಗಳಲ್ಲಿ ಪಟಾಕಿ ಸಿಡಿತ ಇನ್ನೂ ಜೋರಾಗಿಯೇ ಕೇಳಿಬರುತ್ತಿತ್ತು! ಬೆಂಕಿ ಅನಾಹುತ ಪ್ರಾರಂಭವಾದದ್ದು ಹೇಗೆ ಎಂದು ನಿರ್ಣಯಿಸುವುದು ಕಷ್ಟಸಾಧ್ಯವಾದರೂ, ಪಟಾಕಿ ಅಂಗಡಿಗಳಿಂದಲಾಗಿ ಇದು ಘನ ಘೋರವಾಯಿತೆಂಬುದು ಸ್ಪಷ್ಟ. ಪಟಾಕಿ ದುರಂತವು ಸರಕಾರದ ಅಲಕ್ಷ ಮತ್ತು ಇತ್ತೀಚೆಗಿನ ದಿನಗಳಲ್ಲಿ ಸಾರ್ವಜನಿಕರಿಗಾಗುವ ತೊಂದರೆಗಳನ್ನು ಎತ್ತಿ ತೋರಿಸುತ್ತದೆ.

ಇತ್ತೀಚೆಗಿನ ದಿನಗಳಲ್ಲಿ ಬೆಂಗಳೂರು ನಗರದಲ್ಲಿ (ಬಹುಶಃ ಎಲ್ಲಾ ಕಡೆಗಳಲ್ಲೂ ಹೀಗೆಯೇ) ಹಬ್ಬ, ಉತ್ಸವಗಳ ಆಚರಣೆಗಳಿಂದಲಾಗಿ ಸಾರ್ವಜನಿಕರಿಗೆ ಬಹಳ ತೊಂದರೆ ಆಗುತ್ತಲಿದೆ. ಬಲಾತ್ಕಾರವಾಗಿ

ಸಂಪಾದಕೀಯ

ವಂತಿಗೆ ವಸೂಲಿ, ರಸ್ತೆಗಳನ್ನು ಬಂದುಮಾಡಿ ದಿನಗಟ್ಟಲೆ ರಾತ್ರಿ ಮತ್ತು ಹಗಲು ಉತ್ಸವಗಳನ್ನು ನಡೆಸುವುದು, ಧ್ವನಿವರ್ಧಕಕ್ಕೆ ಸಾಧ್ಯವಿದ್ದಷ್ಟು ಸ್ವರ ಹೆಚ್ಚಿಸಿ ನಿದ್ರೆಮಾಡಲೂ ಬಿಡದಿರುವುದು, ಸಮಯದ ಗೊತ್ತುಗುರಿಯಿಲ್ಲದೆ ಟಾಕಿ, ಸಿಡಿಮದ್ದುಗಳನ್ನು ಸುಟ್ಟು ನೆರೆಕರೆಯವರಿಗೆ ತೊಂದರೆ ಮಾಡುವುದು–ಇವೆಲ್ಲವುಗಳಿಂದ ಅನೇಕರಿಗೆ ಕಿರುಕುಳವಾಗುತ್ತಲಿದೆ. ಯಾವುದೇ ಕಾನೂನು, ಕ್ರಮ ಮತ್ತು ನಾಗರಿಕ ಮೌಲ್ಯಗಳಿಗೆ ಬೆಲೆಯಿಲ್ಲದಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಮಾಡದಿರುವುದರಿಂದ ಇದಕ್ಕೆ ಹೆಚ್ಚಿನ ಪ್ರೋತ್ಸಾಹ ದೂರೆತಿದೆ. ದೀಪಾವಳಿ ಸಮಯ ಪಟಾಕಿ ಅಂಗಡಿಯವರಿಗೆ ಲೈಸನ್ಸ್ ಕೊಡುವಾಗ ಕಟ್ಟುನಿಟ್ಟಾದ ಜಾಗರೂಕತೆ ಕ್ರಮವಹಿಸುವಂತೆ ಮಾಡುವುದಕ್ಕೆ ಬದಲಾಗಿ, ಲೈಸನ್ಸ್ ಇಲ್ಲದೆಯೇ ನೂರಾರು ಮಂದಿ ಈ ವ್ಯಾಪಾರದಲ್ಲಿ ತೊಡಗುವಂತಾಗಿದೆ. ಮೊನ್ನೆಯ ಪಟಾಕಿ ದುರಂತಕ್ಕೆ ಅಧಿಕಾರಿಗಳ ಅಲಕ್ಷ್ಯ ಮತ್ತು ಸಾರ್ವಜನಿಕರೂ ಇತ್ತೀಚೆಗಿನ ಹಾವಳಿ ಬಗ್ಗೆ ಅಲಕ್ಷ್ಯರಾಗಿರುವುದೇ ಮುಖ್ಯ ಕಾರಣವಾಗಿದೆ. ಇನ್ನಾದರೂ ಸಾರ್ವಜನಿಕರೂ, ಅಧಿಕಾರಿಗಳೂ ಎಚ್ಚೆತ್ತು ಘಟನೆಯು ಪುನರಾವರ್ತಿಸದಂತೆ ಜಾಗರೂಕರಾಗಿರುವರೆಂದು ಹಾರೈಸುವೆವು. ●

ಕಾರ್ಮಿಕ ಮುಖಂಡರ ಜೀವ ತೆಗೆಯುವ ಬೆದರಿಕೆ

ಮೈಕೋ ಮಾಲಕರ ಪಿತೂರಿಯನ್ನು ಸೋಲಿಸಲು ಕರೆ

ಬಹುರಾಷ್ಟ್ರೀಯ ಕಂಪೆನಿಯಾದ ಬೆಂಗಳೂರಿನಲ್ಲಿರುವ ಮೈಕೋ ಕಾರಖಾನೆಯ ಮಾಲಕರುಗಳು ಸಹಸ್ರಾರು ಮಂದಿ ಕಾರ್ಮಿಕರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಬದಲಾಗಿ, ಕಾರ್ಮಿಕರ ಶಾಂತಿಯುತವಾದ ಐಕ್ಯ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಲಿದ್ದಾರೆ. ನಮ್ಮ ಕಾರ್ಮಿಕರನ್ನು ಮತ್ತು ಸಂಪತ್ತನ್ನು ಸೂರೆಮಾಡುವ ಈ ಮಾಲಕರುಗಳು ಹೋರಾಟವನ್ನು ಹತ್ತಿಕ್ಕುವುದಕ್ಕಾಗಿ ಈಗಾಗಲೇ ಲಕ್ಷಗಟ್ಟಲೆ ಹಣ ಖರ್ಚುಮಾಡಿದ್ದಾರೆ ಎಂಬ ಸುದ್ದಿ ಇದೆ. ಕೆಲವೊಂದುವು ಕರಿಗಾಲುಗಳನ್ನು ಉಪಯೋಗಿಸುವುದು, ಪತ್ರಿಕೆಯಲ್ಲಿ ಸುಳ್ಳು ಪ್ರಚಾರ ನಡೆಸುವುದು, ಅಧಿಕಾರಿಗಳಿಗೆ ಲಂಚಕೊಡುವುದು ಇವೇ ಕ್ರಮಗಳನ್ನು ಮಾಲಕರು ಅನುಸರಿಸುತ್ತಲಿದ್ದಾರೆ. ಕಾರಖಾನೆ ಮಠಾರದಲ್ಲಿ ನಿರ್ಬಂಧ ಹೇರಿದ್ದರೂ ಕಾರ್ಮಿಕರು ಸಾವಿರಗಟ್ಟಲೆಯಲ್ಲಿ ನಗರದ ಬೇರೆಬೇರೆ ಪ್ರದೇಶಗಳಲ್ಲಿ ಸಭೆಸೇರಿ ಹೋರಾಟವನ್ನು ಗುರಿಮುಟ್ಟುವ ತನಕ ಮುಂದುವರಿಸಲು ಯೋಜನೆ ಹಾಕಿರುತ್ತಾರೆ. ಬೇರೆಬೇರೆ ರಾಜಕೀಯ ಪಕ್ಷಗಳಿಂದಲೂ, ನಗರದ ಎಲ್ಲಾ ಕಾರ್ಮಿಕ ಸಂಘಟನೆಗಳಿಂದಲೂ ಬೆಂಬಲ ದೊರೆಯುತ್ತಲಿದೆ. ನವೆಂಬರ್ 4 ರಂದು ಬೇರೆಬೇರೆ ಕಾರ್ಮಿಕ ಸಂಘಟನೆಗಳೆಲ್ಲಾ ಸೇರಿ ಸೌಹಾರ್ದ ಕಾರ್ಯಕ್ರಮವನ್ನು ದೊಡ್ಡ ರೀತಿಯಲ್ಲಿ ನಡೆಸಲೂ ತೀರ್ಮಾನಿಸಲಿರುವರು.

ಕಾರ್ಮಿಕ ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಅವರ ಮನೆಗೆ ಸುಮಾರು 50 ಮಂದಿ ಗೂಂಡಾಗಳು ಬಂದು ಕೊಲೆಮಾಡುವ ಬೆದರಿಕೆ ಹಾಕಿರುವುದನ್ನು ಪ್ರತಿಭಟಿಸಿ, ಮೂರು ಸಾವಿರ ಕಾರ್ಮಿಕರು ಪೋಲೀಸ್ ಕಮಿಷನ್‌ರವರನ್ನು ಭೆಟ್ಟಿಯಾಗಿ ರಕ್ಷಣೆ ಕೇಳಿರುವರು. ಕಾರ್ಮಿಕರ ಐಕ್ಯತೆಯನ್ನು ಮುರಿಯಲು ಅಸಮರ್ಥವಾದ ಮಾಲಕರು ಈಗ ಕಾರ್ಮಿಕ ಮುಖಂಡರನ್ನೇ ಇಲ್ಲದಂತೆ ಮಾಡಲು ಯತ್ನಿಸುತ್ತಲಿರುವುದು ಸ್ಪಷ್ಟವಾಗಿದೆ.

ಅಕ್ಟೋಬರ್ 22 ರಂದು ಸಭೆ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸೆಕ್ರೆಟಾರಿಯಟ್

[ಕಡೆಯ ಪುಟ ನೋಡಿ]

ಬಹುಗುಣರ ದೊಂಬರಲಾಗ?

"ಪ್ರಜಾತಂತ್ರಕ್ಕಾಗಿ ಕಾಂಗ್ರೆಸ್"ನ ಮುಖಂಡ ಶ್ರೀ ಹೇಮಾವತಿ ನಂದ ಬಹುಗುಣ ಇವರು ಚರಣಸಿಂಗರ ಸರಕಾರಕ್ಕೆ ರಾಜಿನಾಮೆ ಇತ್ತ ಮೇಲೆ ಹಲವು ಊಹಾಪೋಹಗಳು ಎದ್ದಿವೆ. ಬಹುಗುಣರ ರಾಜಿನಾಮೆಗೆ ಸಂಬಂಧಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಈ ಕೆಳಗಿನ ಹೇಳಿಕೆಯನ್ನಿದೆ.

"ಶ್ರೀ ಚರಣಸಿಂಗರ ಅಪೇಕ್ಷೆ ಪ್ರಕಾರ ಶ್ರೀ ಬಹುಗುಣ ಅವರು ಕೇಂದ್ರ ಸರಕಾರಕ್ಕೆ ರಾಜಿನಾಮೆ ಇತ್ತ ಘಟನೆಯು ಉಸ್ತುವಾರಿ ಸರಕಾರದ ಹಿಂದಿರುವ ಮೈತ್ರಿಯಲ್ಲಿ ಆಳವಾದ ಬಿರುಕು ಇರುವುದನ್ನು ತೋರಿಸಿಕೊಟ್ಟಿದೆ. ಈ ರೀತಿಯ ಬೆಳವಣಿಗೆಯ ಬಗ್ಗೆ ಸಾಕಷ್ಟು ಲಕ್ಷಣಗಳು ಕಂಡುಬಂದಿದ್ದರೂ, ಇಷ್ಟು ಶೀಘ್ರವಾಗಿ ಪ್ರಧಾನಮಂತ್ರಿಯವರು ರಾಜಿನಾಮೆ ಕೇಳುವ ಕೊನೆಯ ನಿರ್ಧಾರಕ್ಕೆ ಬರುವಷ್ಟರ ಮಟ್ಟಕ್ಕೆ ಹೋಗಿತ್ತೆಂದು ಹೆಚ್ಚಿನವರು ನಿರೀಕ್ಷಿಸಿರಲಿಲ್ಲ. ಸರ್ವಾಧಿಕಾರ ಮತ್ತು ಕೋಮುವಾದ ಶಕ್ತಿಗಳ ವಿರುದ್ಧ ನಡೆಯುತಕ್ಕ ಚುನಾವಣಾ ಹೋರಾಟಕ್ಕೆ ಈ ಬೆಳವಣಿಗೆಯು ಪ್ರತಿಕೂಲವಾಗಿರುತ್ತದೆ. ಶ್ರೀ ಬಹುಗುಣರು ಇತ್ತ ಪತ್ರಿಕಾ ಹೇಳಿಕೆ ಇನ್ನೂ ಹೆಚ್ಚಿನ ಆಘಾತವನ್ನುಂಟುಮಾಡಿದೆ. ಆಂತರಿಕ ಮತ್ತು ಅಂತರಾಷ್ಟ್ರೀಯ ಧೋರಣೆಗಳ ಬಗ್ಗೆ ಬಹಳಷ್ಟು ವಿಚಾರಗಳಲ್ಲಿ ಪ್ರಧಾನಿಯವರೊಡನೆ ಅಭಿಪ್ರಾಯ ಬೇಧವಿತ್ತೆಂಬುದನ್ನು ಮಾಜಿ ಅರ್ಥ ಸಚಿವ ಬಹುಗುಣ ಅವರು ತಿಳಿಸಿದ್ದಾರೆ. ಈ ವಿಚಾರಗಳಲ್ಲಿ ಬಹುಗುಣ ಸರಿಯಾದ ನಿಲುಮೆಯನ್ನು ತಾಳಿದಂತೆ ಅನಿಸುತ್ತದೆ.

ಆದರೆ, ಇಂದಿರಾಗಾಂಧಿಯ ಸರ್ವಾಧಿಕಾರದ ಬಗ್ಗೆ ಇವರು ಏನೂ ಹೇಳದಿರಲು ಕಾರಣವೇನು? ಚರಣಸಿಂಗರು ಕೆಂಬೋಡಿಯಾದ ಬಗ್ಗೆ ತಪ್ಪು ಧೋರಣೆ ತಳೆದಿರುವರೆಂದಿದ್ದರೆ ಇದು ಇಂದಿರಾ ಸರ್ವಾಧಿಕಾರದ ಅಪಾಯವನ್ನು ಹೇಗೆ ಕಡಿಮೆ ಮಾಡುವುದು? ಪ್ರತಿಗಾಮಿ ಶಕ್ತಿಗಳ ವಿರುದ್ಧ ಸಂಯುಕ್ತ ಹೋರಾಟದ ಬಗ್ಗೆ ಬಹುಗುಣರ ಹೇಳಿಕೆ ತಪ್ಪಿಸಿಕೊಂಡಂತಿದೆ. ಚುನಾವಣಾ ಮತ್ತು ಪ್ರಜಾಪ್ರಭುತ್ವ ಹೋರಾಟದ ಮುಖ್ಯ ಗುರಿ ಸರ್ವಾಧಿಕಾರಿ ಮತ್ತು ಕೋಮುಶಕ್ತಿಗಳನ್ನು ಸೋಲಿಸುವುದು ಆಗಿರುವ ಈ ಸಂದರ್ಭದಲ್ಲಿ ಬಹುಗುಣರ ಹೇಳಿಕೆಯನ್ನು ನೋಡಿದಲ್ಲಿ ಅವರು ಇಂದಿರಾ ಗಾಂಧಿಯೊಡನೆ ರಾಜಿಮಾಡಿ, ಇಂದಿರಾ ಕಡೆಗೆ ದೊಂಬರಲಾಗ ಹಾಕುವ ತಯ್ಯಾರಿ ಮಾಡುವಂತಿದೆ. ಇಂದಿರಾಗಾಂಧಿ ಬಗ್ಗೆ ಚುನಾವಣಾ ನಿಲುಮೆಯನ್ನು ಮಾಡುವುದಕ್ಕೆ ಮೊದಲು ಆಕೆಯ ಚುನಾವಣಾ ಘೋಷಣೆಯನ್ನು ಅಭ್ಯಾಸ ಮಾಡಬೇಕಾಗಿದೆ ಎಂದು ಬಹುಗುಣ ಹೇಳಿರುವರು. ಲೋಕದಳದೊಡನೆ ಸಿ.ಎಫ್.ಡಿ.ಯು ಖಡ್ಡಾಯವಾಗಿ ಮಿಲನಗೊಳ್ಳಬೇಕೆಂಬ ಅಸಂಬದ್ಧವಾದ ಬೇಡಿಕೆ ಅಥವಾ ಹಲವಾರು ವಿಚಾರಗಳಲ್ಲಿ ಅಭಿಪ್ರಾಯ ಬೇಧಗಳಿರುವ

[ಕಡೆಯ ಪುಟ ನೋಡಿ]

ನವೆಂಬರ್ ಮೂರರ ಸಮಾವೇಶ ಮುಂದಕ್ಕೆ

ಬೆಂಗಳೂರಿನಲ್ಲಿ ನವೆಂಬರ್ ಮೂರರಂದು ನಡೆಯಬೇಕಾಗಿದ್ದ ರಾಜ್ಯಮಟ್ಟದ ಸರ್ವಾಧಿಕಾರಿ ಮತ್ತು ಕೋಮುವಾದ ವಿರೋಧಿ ಸಮಾವೇಶವನ್ನು ಅನಿವಾರ್ಯ ಕಾರಣಗಳಿಂದಲಾಗಿ ನವೆಂಬರ್ 10ಕ್ಕೆ ಮುಂದೂಡಲಾಗಿದೆ. ನವೆಂಬರ್ 10 ರಂದಿನ ಈ ಕಾರ್ಯಕ್ರಮಕ್ಕೆ ರಾಜ್ಯದ ಎಲ್ಲಾ ಕಡೆಗಳಿಂದಲೂ ಪ್ರತಿನಿಧಿಗಳು ಬರಬಹುದು. ಪ್ರತಿನಿಧಿಗಳಿಗೆ ಉಳಕೊಳ್ಳಲು ಸ್ಥಳದ ವ್ಯವಸ್ಥೆ ಮಾಡಲಾಗುವುದು. ಬೆಳಗಿನಿಂದ ಸಂಜೆತನಕ ಪ್ರತಿನಿಧಿ ಸಭೆ ನಡೆದು ಸಂಜೆಗೆ ಬೃಹತ್ ಮೆರವಣಿಗೆ, ಬಹಿರಂಗ ಸಭೆಗಳ ಕಾರ್ಯಕ್ರಮವಿದೆ.

ಬಿಜಾಪುರ :

ಜನತೆಗೆ ದ್ರೋಹವೆಸಗಿದ್ದು ಜನತಾದವರೇ ಹೊರತು ನಾವಲ್ಲ

ಜನತೆಗೆ ದ್ರೋಹವೆಸಗಿದ್ದು ಜನತಾಪಕ್ಷದವರೇ ಹೊರತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವಲ್ಲ. ಸರ್ವಾಧಿಕಾರಿ ಇಂದಿರಾ ಗಾಂಧಿಯನ್ನು ಸೋಲಿಸಲೂ, ಆಕೆಯನ್ನು ಮತ್ತೆ ಅಧಿಕಾರಕ್ಕೆ ಬಾರದಂತೆ ತಡೆಯಲೂ, ಜನತಾಕ್ಕೆ ನಾವು ಬೆಂಬಲವಿತ್ತರೂ, ಜನತಾದ ವರ್ಗಧೋರಣೆ ವಿರುದ್ಧ ಮತ್ತು ಜನತಾದಲ್ಲಿ ಕೋಮುಶಕ್ತಿಗಳು ಪ್ರಾಬಲ್ಯವಾಗುವುದರ ವಿರುದ್ಧ ಹೋರಾಡುತ್ತಾ ಬಂದಿರುವೆವು. ಆರ್. ಎಸ್. ಎಸ್.-ಜನಸಂಘ ಕೂಟವು ಜನತಾ ಪಕ್ಷವನ್ನು ಕಬಳಿಸಿ ಅಧಿಕಾರ ಯಂತ್ರವನ್ನು ಹಿಡಿದುಕೊಳ್ಳಲು ಯತ್ನಿಸುವಾಗ ಮತ್ತು ಮೊರಾರ್ಜಿ ಸರಕಾರ ಕಾರ್ಮಿಕ ವಿರೋಧಿ, ಜನವಿರೋಧಿ ಸರ್ವಾಧಿಕಾರ ಕ್ರಮಗಳನ್ನು ಅನುಸರಿಸುವಾಗ ಶ್ರಮಜೀವಿಗಳ ಹಿತವನ್ನು ರಕ್ಷಿಸುವ ನಮ್ಮ ಪಕ್ಷ ಅವರನ್ನು ವಿರೋಧಿಸಿತು. ನಾಳೆ ಚರಣಸಿಂಗ್-ಕಾಂಗ್ರೆಸ್ ಸರಕಾರ ನಮ್ಮ ಬೆಂಬಲದಿಂದ ಅಧಿಕಾರಕ್ಕೆ ಬಂದ ಮೇಲೆ ಜನವಿರೋಧಿ ಧೋರಣೆ ಅನುಸರಿಸಿದಲ್ಲಿ ಅವರ ವಿರುದ್ಧವೂ ಎಡಪ್ರಜಾಪ್ರಭುತ್ವ ಶಕ್ತಿಗಳು ಹೋರಾಡಲೇಬೇಕು ಎಂಬುದಾಗಿ ಬಿಜಾಪುರ ನಗರದಲ್ಲಿ ಅಕ್ಟೋಬರ್ 14ರಂದು ಸೇರಿದ್ದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಕಾಂ. ಎಂ. ಕೆ. ಭಟ್ ಘೋಷಿಸಿದರು. ಹರಿಜನ ಒಬ್ಬರನ್ನು ಪ್ರಧಾನಿಯಾಗಲು ರಾಷ್ಟ್ರಪತಿಯವರು ಬಿಟ್ಟಿಲ್ಲ ಎಂದು ಬೊಬ್ಬಿಡುವ ಜನತಾ ಪಕ್ಷದವರಿಗೆ ಸಂಪೂರ್ಣ ಬಹುಮತ ಇರುವಾಗ ಜಗಜೀವನ ರಾಮರು ಹರಿಜನ ಎಂದು ತಿಳಿದಿದ್ದಿಲ್ಲವೇ ಎಂದು ಕಾಂ. ಭಟ್ ಸವಾಲು ಹಾಕಿದರು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಎಡಪಕ್ಷಗಳಿಗೆ ಹೆಚ್ಚಿಗೆ ಪ್ರಾತಿನಿಧ್ಯ ಸಿಗುವುದೆಂದು ಆಶಿಸಿದ ಭಟ್ ಅವರು ಕೋಮು ಮತ್ತು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಜನತೆಯಲ್ಲಿ ಜಾಗೃತಿ ಮೂಡಿಸಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಭಾರತ ಕಮ್ಯೂನಿಸ್ಟ್ ಪಕ್ಷ, ಕರ್ನಾಟಕ ಕಾಂಗ್ರೆಸ್ ಮತ್ತಿತರ ಸಮಾನ ಅಭಿಪ್ರಾಯವುಳ್ಳ ಪಕ್ಷಗಳು ರಾಜ್ಯಮಟ್ಟದ ಸಮಾವೇಶ ನಡೆಸಲೂ ತೀರ್ಮಾನಿಸಿವೆ ಎಂದರು.

ತ್ರಿಪುರಾ ಮತ್ತು ಬಂಗಾಳದ ಎಡರಂಗದ ಸರಕಾರಗಳ ಸಾಧನೆಗಳನ್ನು ವಿವರಿಸಿದ ಕಾಂ. ಎನ್. ಕೆ. ಉಪಾಧ್ಯಾಯ ಅವರು, ಎಡಪಕ್ಷಗಳು ಒಂದಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಟ್ಟು ಕೂಡಿಸಲು ಮುಂದಾಗಲು ಕರೆ ಇತ್ತರು. ವಿದ್ಯಾರ್ಥಿ ಫೆಡರೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಶಾಂತರೇಣುಕಾರಾಧ್ಯ ಅವರೂ ಭಾಷಣ ಮಾಡಿ ಸರ್ವಾಧಿಕಾರಿ ಮತ್ತು ಕೋಮುಶಕ್ತಿಗಳನ್ನು ಸೋಲಿಸಲು ವಿದ್ಯಾರ್ಥಿ ಯುವಜನತೆ ಮುಂದಾಗಲು ಕರೆ ಇತ್ತರು.

ಬಾಗಲಕೋಟೆಯ ಕಾರ್ಮಿಕ ಮುಂದಾಳು ಕಾಂ. ಖಿಲಾಸಿ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ○

ರಾಯಚೂರು :

ರಾಜಕೀಯ ಪರಿಸ್ಥಿತಿಯ ವಿವರಣೆ

ಕಾಂಗ್ರೆಸ್ ಪಕ್ಷದ ಮೂವತ್ತು ವರ್ಷಗಳ ಆಡಳಿತೆಯಲ್ಲಾಗಲೀ, ಜನತಾಪಕ್ಷದ 28 ತಿಂಗಳಿನ ಆಡಳಿತದಲ್ಲಾಗಲೀ ಜನತೆಯ ಮೂಲಭೂತ ಸಮಸ್ಯೆಗಳು ಪರಿಹಾರವಾಗಿಲ್ಲ; ಬದಲು ಜನತೆಯ, ಜನಸಾಮಾನ್ಯರ ಜೀವನ ಸ್ಥಿತಿಯು ಹಾಳಾಗುತ್ತಾ ಬಂದಿದೆ. ಇದಕ್ಕೆ ಕಾರಣ ಈ ಪಕ್ಷಗಳು ನಮ್ಮ ದೇಶವನ್ನು ಬಂಡವಾಳಶಾಹಿ ಪಥದಲ್ಲಿ ಒಯ್ಯುವುದೇ ಆಗಿದೆ. ಆಳುವ ವರ್ಗಗಳಲ್ಲಿ ಈಗ ಇಂದಿರಾ ಕಾಂಗ್ರೆಸ್, ಜನತಾ ಮತ್ತು ಲೋಕದಳ-ಕಾಂಗ್ರೆಸ್‌ಗಳೆಂಬ ಮೂರು ಮುಖ್ಯ ಗುಂಪುಗಳಿವೆ. ಇವೆಲ್ಲವುಗಳ ವರ್ಗಗುಣವು ಮೂಲಭೂತವಾಗಿ ಒಂದೇ ಆದರೂ, ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಮತ್ತು ಆರ್. ಎಸ್. ಎಸ್.-ಜನಸಂಘ ನಿಯಂತ್ರಿತ ಜನತಾಪಕ್ಷಗಳನ್ನು ಲೋಕದಳ-ಕಾಂಗ್ರೆಸ್ ಕೂಟವು ವಿರೋಧಿಸಿರುವುದರಿಂದ ನಾವೂ ಈ ಕೂಟಕ್ಕೆ ತಾತ್ಕಾಲಿಕವಾಗಿ ಬೆಂಬಲ ಕೊಡಬೇಕಾಗಿದೆ.

ಸರ್ವಾಧಿಕಾರಿ ಮತ್ತು ಕೋಮು ಶಕ್ತಿಗಳನ್ನು ಹಿಮ್ಮೆಟ್ಟಿಸಲು ಇದು ಅವಶ್ಯವಾಗಿದೆ ಎಂದು ರಾಯಚೂರಿನ ಕಾಟಿಡವಾರ್ಜದಲ್ಲಿ 10-10-79ರ ಸಂಜೆ ಸೇರಿದ್ದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅವರು ಹೇಳಿದರು. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಲೂ ಕರೆ ಇತ್ತರು.

ರಾಯಚೂರಿನ ಕಾಂ. ಪುರುಷೋತ್ತಮ ಅವರು ಸ್ಥಳೀಯ ಸಮಸ್ಯೆಗಳ ಬಗ್ಗೆ ವಿವರಣೆ ನೀಡುತ್ತಾ ಪಕ್ಷವನ್ನು ಬೆಳೆಸಲು ಸಹಾಯ, ಸಹಕಾರವನ್ನು ಕೋರಿದರು. ●

ಶ್ರೀನಿವಾಸಪುರ ತಾಲ್ಲೂಕಿನಲ್ಲಿ ರೈತಸಂಘದಿಂದ ೧೫೦ ಎಕರೆ ಭೂಮಿ ಆಕ್ರಮಣ

ಕೋಲಾರ ಜಿಲ್ಲಾ ರೈತಸಂಘದ ಕರೆಯಂತೆ ಶ್ರೀನಿವಾಸಪುರ ತಾಲ್ಲೂಕ್ ಅಡ್ಡಗಲ್ ಗ್ರೂಪ್‌ಗೆ ಸೇರಿದ ಪಂಚಾಯಿತಿಯಲ್ಲಿ ಕಾಂ. ಮುನಿಶ್ವರ ಚಾರಿ ಮುಖಂಡತ್ವದಲ್ಲಿ ಸಣ್ಣ ರೈತರು, ಭೂಹೀನರು, ಕೃಷಿಕಾರ್ಮಿಕರು ದೊಡ್ಡ ರೀತಿಯಲ್ಲಿ ಸರ್ಕಾರಿ ಬಂಜರು ಭೂಮಿಯನ್ನು ಆಕ್ರಮಿಸಿ ಉಳುಮೆ ಮಾಡಿದರು. ಇದರಲ್ಲಿ ಅಡ್ಡಗಲ್ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಭೂಹೀನರು ಅಂದರೆ ಗೂನೋನಿಪಲ್ಲಿ, ಕಾಟೋಳ್ಳಪಲ್ಲಿ, ಕುಂಟೋರಿಪಲ್ಲಿ, ಕುಮ್ಮಲೊಳ್ಳಪಲ್ಲಿ, ಮಲ್ಲಿಮಾತನಹಳ್ಳಿ, ಕಂಭಾಳ್ಳಪಲ್ಲಿ ಕೃಷಿಕಾರ್ಮಿಕರು ನೇಗಿಲುಗಳನ್ನು ಕಟ್ಟಿ ಉತ್ತು ಹುರುಳಿ ಬಿತ್ತನೆ ಮಾಡಿದ್ದಾರೆ. ಅದರಲ್ಲಿದ್ದ ಕಲ್ಲು ಮುಳ್ಳು ಗಿಡಗಳನ್ನು ಕಿತ್ತುಹಾಕಿ ಹಳ್ಳದಿನ್ನೆಗಳನ್ನು ಹಸನು ಮಾಡಿ ನಾಜೋಕು ಮಾಡಿರುತ್ತಾರೆ. ಇದನ್ನು ಬಿಟ್ಟರೆ ಅವರಿಗೆ ಬೇರೆ ಜಮೀನುಗಳೇ ಇರುವುದಿಲ್ಲಾ, ಜೀವನೋಪಾಯಕ್ಕೆ ಬೇರೆ ಮಾರ್ಗವಿಲ್ಲಾ. ಕೃಷಿ ಕೂಲಿಗಾರರು ಇದುವರೆವಿಗೂ ಸರ್ಕಾರಕ್ಕೆ ಅನೇಕ ಅರ್ಜಿಗಳನ್ನು ಮನವಿಗಳನ್ನು ಕೊಟ್ಟರೂ ಯಾವ ಪ್ರಯೋಜನವಾಗಲಿಲ್ಲವೆಂದು ತಮ್ಮ ನೋವನ್ನು ತೋಡಿಕೊಂಡರು.

ಇದಲ್ಲದೆ ಜಿಲ್ಲೆಯಾದ್ಯಂತ ಭೂಗ್ರಹಣ ನಡೆಯುತ್ತಿರುವ ವರದಿಗಳು ನಮ್ಮ ಆಫೀಸ್‌ಗೆ ಬರುತ್ತಿವೆ. ○

ಗುಲ್ಬರ್ಗ :

ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಲು ಕರೆ

ಇಂದಿರಾಗಾಂಧಿಯ ಸರ್ವಾಧಿಕಾರಿ ಆಳಿಕೆ 1977ರ ಲೋಕಸಭೆ ಚುನಾವಣೆ ನಂತರ ಕೊನೆಗೊಂಡಿದ್ದರೂ ಕಳೆದೆರಡು ವರ್ಷಗಳ ಜನತಾ ಪಾರ್ಟಿಯ ಅಸಮರ್ಪಕ ಆಡಳಿತೆಯಿಂದಾಗಿ, ಸರ್ವಾಧಿಕಾರದ ಘಟಸರ್ಪ ಮತ್ತೆ ಹೆಡೆಎತ್ತಿ ನಿಂತಿದೆ. ಇದು ಅಪಾಯಕಾರಿ. ಇದರ ಜೊತೆಯಲ್ಲೇ ಜಾತೀಯವಾದಿಗಳೂ ಜಾತೀಯ ಸೌಹಾರ್ದತೆಯನ್ನು ಕಬಳಿಸಿ, ದಂಗೆ ಉಂಟುಮಾಡುತ್ತಿದ್ದಾರೆ. ಈ ಎರಡೂ ಶಕ್ತಿಗಳು ಸಮತಾವಾದ ಮತ್ತು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ. ಆದ್ದರಿಂದ ಈ ಶಕ್ತಿಗಳನ್ನು ಸೋಲಿಸುವಂತೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ರಾಜ್ಯಸಮಿತಿ ಕಾರ್ಯದರ್ಶಿಯವರಾದ ಕಾಂ. ಎಂ. ಕೆ. ಭಟ್ ಅವರು ಗುಲ್ಬರ್ಗದಲ್ಲಿ ತಾ. 12-10-79 ರಂದು ಸೇರಿದ ಕಾರ್ಯಕರ್ತರ ಸಭೆಯಲ್ಲಿ ಕರೆ ಕೊಟ್ಟರು. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ರಾಜಕೀಯ ನಿಲುಮೆಯನ್ನು ವಿವರಿಸಿ, ಅದನ್ನು ಜನತೆಯಲ್ಲಿ ಪ್ರಚಾರಗೊಳಿಸಬೇಕೆಂದು ಹೇಳಿದರು. ರಾಜ್ಯಸಮಿತಿ ಸದಸ್ಯರಾದ ಎನ್. ಕೆ. ಉಪಾಧ್ಯಾಯರು ಭಾಷಣಮಾಡುತ್ತ ಇಂದಿನ ರಾಜಕೀಯ ಗೊಂದಲ ಪರಿಸ್ಥಿತಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ನಿಲುವೇ; ಎಡ ಮತ್ತು ಪ್ರಜಾಪ್ರಭುತ್ವ ರಂಗದ ರಚನೆ, ಅದರ ಸರಕಾರ ಸ್ಥಾಪನೆ, ಜನರ ಸಮಸ್ಯೆ ಬಗೆಹರಿಸಲು ಒಂದೇ ಒಂದು ದಾರಿಯಾಗಿದೆಯೆಂದು ಹೇಳಿ ಈ ಕಾರಣದಿಂದಲೇ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಸರ್ವಾಧಿಕಾರತ್ವವನ್ನೂ, ಜಾತೀಯತೆಯನ್ನು ವಿರೋಧಿಸುವ ಅರಸು ಕಾಂಗ್ರೆಸ್ ಮತ್ತು ಲೋಕದಳದ ಜೊತೆಸೇರಿ ಮುಂಬರುವ ಚುನಾವಣೆಯಲ್ಲಿ ಹೋರಾಡಲು ನಿರ್ಧರಿಸಿದೆಂದು ಹೇಳಿದರು. ಗುಲ್ಬರ್ಗದ ಪಾರ್ಟಿ ಮುಖಂಡರಾದ ಗಂಗಾಧರ ನಮೋಶಿಯವರು ಅಧ್ಯಕ್ಷತೆ ವಹಿಸಿದ್ದರು. ○

ಸಿರ್ಸಿ :

ಜನತಾ ಅಥವಾ ಇಂದಿರಾರಿಂದ ಪರಿಹಾರ ಅಸಾಧ್ಯ

ಜನತಾಪಕ್ಷ ಅಥವಾ ಇಂದಿರಾ ಗಾಂಧಿಯಿಂದ ದೇಶದ ಸಮಸ್ಯೆಗಳಿಗೆ ಪರಿಹಾರ ಸಾಧ್ಯವಿಲ್ಲ. ಎಡ ಪ್ರಜಾಪ್ರಭುತ್ವ ಶಕ್ತಿಗಳಿಂದ ಮಾತ್ರ ಇದು ಸಾಧ್ಯ. ಎಡ ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗೆ ಅನುಕೂಲವಾಗುವ ದೃಷ್ಟಿಯಿಂದ ಮುಂಬರುವ ಚುನಾವಣೆಯಲ್ಲಿ ಕೋಮು ಮತ್ತು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ವಿರುವೆಲ್ಲರೂ ಹೊಂದಾಣಿಕೆ ಮಾಡಿ ಒಟ್ಟಾಗಿ ಹೋರಾಡಬೇಕಾಗಿದೆ ಎಂದು ಉ. ಕ. ಜಿಲ್ಲೆಯ ಸಿರ್ಸಿಯಲ್ಲಿ ಸೇರಿದ್ದ ಬೃಹತ್ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಕಾಂ. ಎಂ. ಕೆ. ಭಟ್ ಹೇಳಿದರು. ಸ್ಥಳೀಯ ಸಮಸ್ಯೆಗಳ ಬಗ್ಗೆ ಹೋರಾಟ ನಡೆಸುತ್ತಾ ಬಂದಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೆ ಬೆಂಬಲವೀಯಲು ಅಧ್ಯಕ್ಷ ಸ್ಥಾನವಹಿಸಿದ್ದ ಕಾಂ. ಧಾಳೇಶ್ವರರು ಕೋರಿಕೊಂಡರು. ವಿದ್ಯಾರ್ಥಿ ಮುಖಂಡ ಕಾಂ. ಶಾಂತರೇಣುಕಾರಾಧ್ಯ ಅವರು ಭಾಷಣ ಮಾಡಿದರು. ಕಾಂ. ಮಂಜುನಾಥ ಪುಲ್ಕರ್ ಸ್ವಾಗತ ಮಾಡಿದರು. ●

ದಾಂಡೇಲಿ :

ರಾಜಕೀಯ ಜಾಗೃತಿ ಬೆಳೆಸಲು ಕಾರ್ಮಿಕ ವರ್ಗಕ್ಕೆ ಕರೆ

ದೇಶದಲ್ಲಿ ಇಂದು ಬೆಳೆದು ಬಂದಿರುವ ಸರ್ವಾಧಿಕಾರಿ ಮತ್ತು ಕೋಮು ಶಕ್ತಿಗಳನ್ನು ಸದೆಬಡಿಯದಿದ್ದಲ್ಲಿ ಕಾರ್ಮಿಕವರ್ಗ ಮತ್ತು ಶ್ರಮಜೀವಿಗಳ ಐಕ್ಯತೆಗೆ ಅಪಾಯವಿದೆ. ಆದುದರಿಂದಲೆ ಕಾರ್ಮಿಕ ವರ್ಗ ಎಚ್ಚೆತ್ತು ಈ ಶಕ್ತಿಗಳನ್ನು ಸೋಲಿಸಲು ಮುಂದಾಗಲು ಉ. ಕ. ಜಿಲ್ಲೆಯ ದಾಂಡೇಲಿಯಲ್ಲಿ ಸಂಜೆ 8 ಗಂಟೆಗೆ ಸೇರಿದ್ದ ಬೃಹತ್ ಕಾರ್ಮಿಕ ಸಭೆಯನ್ನುದ್ದೇಶಿಸಿ ಕಾಂ. ಎಂ. ಕೆ. ಭಟ್ ಮತ್ತು ಎನ್. ಕೆ. ಉಪಾಧ್ಯಾಯ ಕರೆ ನೀಡಿದರು. ಪ್ರಸ್ತುತ ರಾಜಕೀಯ ಪರಿಸ್ಥಿತಿ ಮತ್ತು ಪಕ್ಷದ ನಿಲುಮೆಯ ಬಗ್ಗೆ ವಿವರಣೆ ಇತ್ತ ಇವರು, ಉಳಿದೆಲ್ಲಾ ರಾಜ್ಯಗಳಲ್ಲಿ ಶ್ರಮಜೀವಿಗಳ ಮೇಲೆ ಸರಕಾರಿ ಯಂತ್ರವು ಆಕ್ರಮಣ ಮಾಡುವಾಗ, ಬಂಗಾಲ ಮತ್ತು ತ್ರಿಪುರಾಗಳಲ್ಲಿ ಎಡರಂಗ ಸರಕಾರಗಳು ಜನತೆಯ, ಶ್ರಮಜೀವಿಗಳ ಸಮಸ್ಯೆ ಪರಿಹಾರಕ್ಕೆ ತಮ್ಮಿಂದಾದಷ್ಟೂ ಪ್ರಯತ್ನಿಸಿ ಜನತೆಯ ವಿಶ್ವಾಸಗಳಿಸಿವೆ ಎಂದರು. ಮುನ್ಸಿಪಲ್ ಚುನಾವಣೆಯಲ್ಲಿ ದಾಂಡೇಲಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಬಹುಮತ ಪಡೆಯುವಂತೆ ಮಾಡಿದ ಶ್ರಮಜೀವಿಗಳಿಗೆ ಅಭಿನಂದನೆ ಇತ್ತ ಇವರುಗಳು, ದಾಂಡೇಲಿಯ ಡಿ. ಎಫ್. ಎ. ಕಾರ್ಮಿಕರ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಭಾಷಣ ಮಾಡಿದ ವಿದ್ಯಾರ್ಥಿ ಮುಂದಾಳು ಕಾಂ. ಶಾಂತರೇಣುಕಾರಾಧ್ಯ ಅವರು ವಿದ್ಯಾರ್ಥಿಗಳ ಸಂಘಟಿತ ಹೋರಾಟದ ಅವಶ್ಯಕತೆಯನ್ನು ವಿವರಿಸಿದರು. ಕಾಂ. ಜಿ. ವಿ. ಪವಾರ್ ಅಧ್ಯಕ್ಷತೆ ವಹಿಸಿದ್ದರು. ○

ಹಳಿಯಾಳ :

ಮಾರುತಿ ಗಣೇಶ್ ಪವಾರ್ ಕುಟುಂಬಕ್ಕೆ ಸಹಾಯ

ಉ. ಕ. ಜಿಲ್ಲೆಯ ಹಳಿಯಾಳದಲ್ಲಿ 16-10-79 ರಂದು ಸಂಜೆಗೆ ನಡೆದ ಬಹಿರಂಗ ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅವರು ಪೋಲೀಸ್ ಗೋಲಿಬಾರಿಗೆ ಬಲಿಯಾದ ಕಾಂ. ಮಾರುತಿ ಗಣೇಶ ಪವಾರ್ ಅವರ ಕುಟುಂಬಕ್ಕೆ ಸಂಗ್ರಹವಾಗಿದ್ದ ಆರುನೂರಇಪ್ಪತ್ತೆಂಟು ರೂಪಾಯಿಗಳನ್ನು ಕೊಟ್ಟರು. ದೊಡ್ಡ ಸಂಖ್ಯೆಯಲ್ಲಿ ಜನ ಸೇರಿದ್ದ ಸಭೆಯನ್ನುದ್ದೇಶಿಸಿ ಕಾಂ. ಎಂ. ಕೆ. ಭಟ್, ಕಾಂ. ವಿ. ಜೆ. ಕೆ. ನಾಯರ್, ಕಾಂ. ಎನ್. ಕೆ. ಉಪಾಧ್ಯಾಯ, ಕಾಂ. ಆರ್. ಜಿ. ಸ್ಥಳೀಕರ ಮತ್ತು ವಿದ್ಯಾರ್ಥಿ ಫೆಡರೇಷನ್ ಮುಖಂಡ ಕಾಂ. ಶಾಂತರೇಣುಕಾರಾಧ್ಯ ಮೊದಲಾದವರು ಮಾತನಾಡಿದರು. ರಾಜ್ಯ ಸರಕಾರದ ನೀತಿಯನ್ನು ಖಂಡಿಸಿದ ಭಾಷಣಕಾರರು ಸರಕಾರವು ನ್ಯಾಯ ಕೊಡದಿದ್ದಲ್ಲಿ ರಾಜ್ಯದಾದ್ಯಂತ ಹಳಿಯಾಳ ಮಾದರಿ ಹೋರಾಟ ಮಾಡುವುದಾಗಿ ಘೋಷಿಸಿದರು. ಕಾಂ. ಉಡಚಪ್ಪಾ ಬೊಬಾಟಿ ಸ್ವಾಗತ ಭಾಷಣ ಮಾಡಿದರು. ●

ಹೆಚ್ಚುತ್ತಿರುವ ಕಾರ್ಮಿಕ ಅಶಾಂತಿ

ಸರಕಾರಿ ಮೂಲಗಳಿಂದ 'ಇಂಡಿಯನ್ ಎಕ್ಸ್‌ಪ್ರೆಸ್: 9-10-79'ರಲ್ಲಿ ಪ್ರಕಟವಾದ ಅಂಕಿಸಂಖ್ಯೆಗಳಂತೆ, 1979ನೇ ವರ್ಷ ಮೊದಲ ಆರು ತಿಂಗಳ ಅವಧಿಯಲ್ಲಿ ಮುಷ್ಕರ ಮತ್ತು ಲಾಕೌಟುಗಳಿಂದ ಕೈಗಾರಿಕಾ ಕಾರ್ಮಿಕರ ಒಟ್ಟು 22.47 ಮಿಲಿಯ ಕೆಲಸ ದಿನಗಳು ನಷ್ಟವಾಗಿವೆ. ಇದರಲ್ಲಿ 2.27 ಮಿಲಿಯ ಕೆಲಸದ ದಿನಗಳು ಲಾಕ್‌ಔಟ್‌ಗಳಿಂದಾಗಿಯೂ, 20.20 ಮಿಲಿಯ ಕೆಲಸದ ದಿನಗಳು ಮುಷ್ಕರಗಳಿಂದಾಗಿಯೂ ನಷ್ಟವಾಗಿವೆ. 1978ರ ಮೊದಲ ಆರು ತಿಂಗಳ ಅವಧಿಯಲ್ಲಿ ಒಟ್ಟು 14.92 ಮಿಲಿಯ ಕೆಲಸದ ದಿನಗಳು ನಷ್ಟವಾಗಿದ್ದು, ಕಳೆದ ವರ್ಷಕ್ಕಿಂತ ಈ ವರ್ಷದಲ್ಲಿ ಗಣನೀಯ ಪ್ರಮಾಣದಲ್ಲಿ ಕೆಲಸದ ದಿನಗಳು ನಷ್ಟವಾಗಿವೆ. ರೈಲ್ವೆ ನೌಕರರೂ ಮುಂದಿನ ನವೆಂಬರ್ ತಿಂಗಳಲ್ಲಿ ಮುಷ್ಕರ ಹೂಡುವರೆಂದು ತಿಳಿದು ಬಂದಿದೆ. ಅವರ ಮುಷ್ಕರ ಸಂಭವಿಸಿದರೆ, 1974ರಲ್ಲಿ ರೈಲ್ವೆ ನೌಕರರ ಮುಷ್ಕರದಿಂದಾಗಿ ಒಟ್ಟು 40.26 ಮಿಲಿಯ ಕೆಲಸದ ದಿನಗಳು ನಷ್ಟವಾದ ಅತಿ ದೊಡ್ಡ ದಾಖಲೆಯನ್ನೂ ಈ ವರ್ಷಾಂತ್ಯದಲ್ಲಿ ಮೀರುವ ಸಂಭವವಿದೆ.

ಈ ವರ್ಷದ ಮೊದಲ ಎರಡು ತಿಂಗಳುಗಳಲ್ಲಿ, ಜನವರಿ ಮತ್ತು ಫೆಬ್ರವರಿಯಲ್ಲಿ ಅನುಕ್ರಮವಾಗಿ 8.23 ಮಿಲಿಯ ಹಾಗೂ 6.88 ಮಿಲಿಯ ಕೆಲಸದ ದಿನಗಳು ನಷ್ಟವಾಗಿವೆ. 1978ರ ಜನವರಿ ಮತ್ತು ಫೆಬ್ರವರಿಯಲ್ಲಿ ಕೇವಲ 2.4 ಮಿಲಿಯ ಹಾಗೂ 2.1 ಮಿಲಿಯ ಕೆಲಸದ ದಿನಗಳು ನಷ್ಟವಾಗಿದ್ದವು. ಪ. ಬಂಗಾಳದಲ್ಲಿ ಹಲವು ವರ್ಷಗಳ ನಂತರ ಸೆಣಬು ಕೈಗಾರಿಕೆಯಲ್ಲಿ ಐಕ್ಯ ಹೋರಾಟ ಹಾಗೂ ಸಾರ್ವತ್ರಿಕ ಮುಷ್ಕರಗಳು, ಮುದ್ರಣ ಕೈಗಾರಿಕೆಯಲ್ಲಿ ಮೊತ್ತ ಮೊದಲ ಮುಷ್ಕರಗಳು ಮತ್ತು ಇಂಜಿನಿಯರಿಂಗ್ ಕೈಗಾರಿಕೆಯಲ್ಲಿ ಮುಷ್ಕರಗಳು, ದೇಶಾದ್ಯಂತ ಬಂದರು ಕಾರ್ಮಿಕರ ಮತ್ತು ಬ್ಯಾಂಕು ನೌಕರರ ಮುಷ್ಕರಗಳೂ ಮುಖ್ಯವಾಗಿ ಈ ವರುಷದ ಮೊದಲ ಎರಡು ತಿಂಗಳುಗಳಲ್ಲಿ ಭಾರೀ ಪ್ರಮಾಣದಲ್ಲಿ ಕೆಲಸದ ದಿನಗಳ ನಷ್ಟಕ್ಕೆ ಕಾರಣಗಳಾಗಿವೆ. ಈ ಕೈಗಾರಿಕೆಗಳಲ್ಲಿ ಇನ್ನೂ ಕೆಲವು ವರ್ಷಗಳವರೆಗೆ ಇಂತಹ ಭಾರೀ ಮುಷ್ಕರಗಳು ನಡೆಯಲಾರವು. ಕಾರಣ, ಮೊತ್ತ ಮೊದಲಿಗೆ ಈ ಕೈಗಾರಿಕೆಗಳಲ್ಲಿ ವ್ಯಾಪಕವಾದ ಮತ್ತು ತೃಪ್ತಿಕರವಾದ ವೇತನ ಹಾಗೂ ಸೇವಾ ಸಂಬಂಧಗಳ ಕುರಿತು ಒಪ್ಪಂದಗಳಾಗಿವೆ. ತುರ್ತು ಪರಿಸ್ಥಿತಿಯ ಪೂರ್ವದಿಂದಲೂ ಅದುಮಿಟ್ಟ ಕಾರ್ಮಿಕರ ಮತ್ತು ನೌಕರರ ಬೇಡಿಕೆಗಳನ್ನು ಈಡೇರಿಸದೇ ಇದ್ದುದರಿಂದ ಈ ಮುಷ್ಕರಗಳು ಸ್ಫೋಟನಗೊಂಡವು. ಪ. ಬಂಗಾಳದಲ್ಲಿ ಎಡರಂಗ ಸರಕಾರವು ಹಿಂದಿನ ಕಾಂಗ್ರೆಸ್ ಸರಕಾರಗಳಂತೆ ಮುಷ್ಕರಗಳನ್ನು ಮುರಿಯುವ ಬದಲು ಅವುಗಳಿಗೆ ತನ್ನ ಬೆಂಬಲ ಕೊಟ್ಟು ಕಾರ್ಮಿಕ ವಿವಾದಗಳಲ್ಲಿ ಕಾರ್ಮಿಕ ಸಂಘಗಳ ಮತ್ತು ಮಾಲಕರ ಸಂಘಗಳ ಮಧ್ಯೆ ಸಕ್ರಿಯವಾಗಿ ಮಧ್ಯಸ್ಥಿಕೆ ನಡೆಸಿ ಯೋಗ್ಯ ದ್ವಿಪಕ್ಷೀಯ ಒಪ್ಪಂದಗಳಿಗೆ ಬರಲು ಅನುಕೂಲ ಮಾಡಿಕೊಟ್ಟಿತು.

ಈ ವರ್ಷದ ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಅನುಕ್ರಮವಾಗಿ 1.7 ಮಿಲಿಯ, 0.7 ಮಿಲಿಯ, 1.4 ಮಿಲಿಯ ಕೆಲಸದ ದಿನಗಳು ನಷ್ಟವಾಗಿವೆ. 1978ರ ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಅನುಕ್ರಮವಾಗಿ 2 5 ಮಿಲಿಯ, 2.7 ಮಿಲಿಯ ಮತ್ತು 2.3 ಮಿಲಿಯ ಕೆಲಸದ ದಿನಗಳು ನಷ್ಟವಾಗಿವೆ. ಈ ವರ್ಷದ ಜೂನ್ ತಿಂಗಳಲ್ಲಿ 3.6 ಮಿಲಿಯ ಕೆಲಸದ ದಿನಗಳು ನಷ್ಟವಾಗಿದ್ದರೆ, ಕಳೆದ ವರ್ಷ ಅದೇ ತಿಂಗಳಲ್ಲಿ 3.0 ಮಿಲಿಯ ಕೆಲಸದ ದಿನಗಳು ನಷ್ಟವಾಗಿವೆ. ಈ ವರ್ಷದ ಮಧ್ಯಕಾಲದಲ್ಲಿ ದೇಶಾದ್ಯಂತ ಉಕ್ಕು ಮತ್ತು ಕಲ್ಲಿದ್ದಲು ಕೈಗಾರಿಕೆಗಳ ಕಾರ್ಮಿಕರ ಸಂಘಟಿತ ಹೋರಾಟದ ಫಲವಾಗಿ ಅತ್ಯುತ್ತಮವಾದ ದ್ವಿಪಕ್ಷೀಯ ಒಪ್ಪಂದಗಳಾಗಲು ಸಾಧ್ಯವಾಯಿತು. ಈ ಒಪ್ಪಂದಗಳ ಯಶಸ್ಸಿಗೂ ಪಶ್ಚಿಮ ಬಂಗಾಳದ ಎಡರಂಗ ಸರಕಾರವೂ ಅಲ್ಲಿನ ಸಿ. ಐ. ಟಿ. ಯು. ಮುಂತಾದ ಕ್ರಾಂತಿಕಾರಕ ಕಾರ್ಮಿಕ ಸಂಘಗಳೂ ಪ್ರಬಲ ಕಾರಣಗಳಾಗಿವೆ.

1975ರಲ್ಲಿ ತುರ್ತುಪರಿಸ್ಥಿತಿ ಜಾರಿಗೆ ಬಂದ ಮೊದಲ ವರ್ಷದಲ್ಲಿ ಕಾರ್ಮಿಕ ಸಂಘಗಳು ಜಾಗರೂಕತೆಯಿಂದ ರಕ್ಷಣಾತ್ಮಕವಾಗಿ ವರ್ತಿಸಬೇಕಾಯಿತು. ಹೀಗಾಗಿ ಆ ವರ್ಷ ಒಟ್ಟು 21.9 ಮಿಲಿಯ ಕೆಲಸದ ದಿನಗಳ ನಷ್ಟದಲ್ಲಿ ಮುಷ್ಕರಗಳಿಂದ ಕೇವಲ 5.2 ಮಿಲಿಯ ಕೆಲಸದ ದಿನಗಳು ನಷ್ಟವಾಗಿದ್ದವು. ಆದರೆ, ಮಾಲಕರು ಮುಖ್ಯವಾಗಿ ಗುತ್ತೇದಾರಿ ಬಂಡವಾಳಗಾರರು ಸರಕಾರದ ಬೆಂಬಲದಿಂದ ತುರ್ತುಪರಿಸ್ಥಿತಿಯಲ್ಲಿನ ಕಾರ್ಮಿಕ ದಮನಕಾರಿ ಧೋರಣೆಯಿಂದ ಧೈರ್ಯ ಪಡೆದು ಕಾರ್ಮಿಕ ವಿವಾದಗಳಲ್ಲೆಲ್ಲಾ ನಿರ್ದಾಕ್ಷಿಣ್ಯದಿಂದ ಲಾಕ್‌ಔಟ್ ಸಾರಿದುದರಿಂದ 16.7 ಮಿಲಿಯ ಕೆಲಸದ ದಿನಗಳು ನಷ್ಟವಾದವು. 1976ರಲ್ಲಿಯೂ ತುರ್ತುಪರಿಸ್ಥಿತಿ ಮುಂದುವರೆದುದರಿಂದ ಮಾಲಿಕರದ್ದೇ ಮೇಲ್ಗೈ ಆಯಿತು. ಲಾಕ್‌ಔಟ್‌ನಿಂದ 9.95 ಕೆಲಸದ ದಿನಗಳು ನಷ್ಟವಾದವು. ಮುಷ್ಕರಗಳಿಂದಾಗಿ ಕೇವಲ 2.8 ಮಿಲಿಯ ಕೆಲಸದ ದಿನಗಳು ನಷ್ಟವಾದವು. ಇದರಿಂದ ತಿಳಿಯುವುದೇನೆಂದರೆ, ತುರ್ತುಪರಿಸ್ಥಿತಿಯಲ್ಲಿಯೂ ಭಾರಿ ಪ್ರಮಾಣದಲ್ಲಿ ಮುಷ್ಕರಗಳೂ, ಹೋರಾಟಗಳೂ ನಡೆದಿದ್ದವು. ಆದರೆ, ಪತ್ರಿಕೆಗಳಲ್ಲಿ ಅವುಗಳ ಬಗ್ಗೆ ವರದಿಗಳಾಗುತ್ತಿರಲಿಲ್ಲ! ಹೆಚ್ಚಿನ ಮುಷ್ಕರಗಳು ಲಾಕ್‌ಔಟನಲ್ಲಿ ಮುಕ್ತಾಯಗೊಂಡು ಕೆಲಸಗಾರರು ಅಪಾರ ಕಷ್ಟನಷ್ಟಗಳಿಗೆ ಒಳಗಾಗಿದ್ದರು.

ಆದರೆ, ತುರ್ತುಪರಿಸ್ಥಿತಿ ಅಂತ್ಯವಾದೊಡನೆ 1977ರಲ್ಲಿಯೇ ಮುಷ್ಕರಗಳಿಂದಾಗಿ 13.41 ಮಿಲಿಯ ಕೆಲಸದ ದಿನಗಳು ನಷ್ಟವಾದವು. ಲಾಕ್‌ಔಟಿನಿಂದ 11.91 ಕೆಲಸದ ದಿನಗಳು ನಷ್ಟವಾದವು. 1978ರಲ್ಲಿ ಮುಷ್ಕರಗಳಿಂದ ಮತ್ತು ಲಾಕ್‌ಔಟ್‌ಗಳಿಂದ ಅನುಕ್ರಮವಾಗಿ 10.95 ಮಿಲಿಯ ಮತ್ತು 10.52 ಮಿಲಿಯ ಕೆಲಸದ ದಿನಗಳು ನಷ್ಟವಾದವು. 1978 ಅಥವಾ 1979ರಲ್ಲಿ ಕೈಗಾರಿಕಾ ಸಂಬಂಧಗಳ ಮಸೂದೆಯು ಜಾರಿಗೆ ಬಂದುದೇ ಆದರೆ, ತುರ್ತುಪರಿಸ್ಥಿತಿಯ ಕಾಲದಂತೆ, ಮುಷ್ಕರಗಳು ಲಾಕ್‌ಔಟ್‌ಗಳಿಂದ ಮುರಿದು ಬೀಳುತ್ತಿದ್ದವು. ಗುತ್ತೇದಾರಿ ಬಂಡವಾಳಗಾರರ ಲಾಭಗಳು ಹೆಚ್ಚಿ, ಕೆಲಸಗಾರರು ಇನ್ನಷ್ಟು ಶೋಷಣೆಗೊಳಗಾಗಿ ನಿರ್ಗತಿಕರಾಗುತ್ತಿದ್ದರು.

●

ಜಪಾನಿನಲ್ಲಿ ಕಮ್ಯುನಿಸ್ಟರ ಪ್ರಾಬಲ್ಯ

ಪೂರ್ವಾರ್ಧ ಗೋಲದಲ್ಲಿ ಜಪಾನ್ ಒಂದು ಬಲಾಢ್ಯ ಬಂಡವಾಳಶಾಹಿ ರಾಷ್ಟ್ರವಾಗಿದೆ. ಬಂಡವಾಳಶಾಹಿ ಪದ್ಧತಿಯ ಅದ್ಭುತ ಸಾಧನೆಗೆ ಜಪಾನ್ ದೇಶವನ್ನು ಎತ್ತಿ ತೋರಿಸಲಾಗುತ್ತಿದೆ. ಪಶ್ಚಿಮ ಯೂರೋಪಿನ ಹಾಗೂ ಅಮೇರಿಕದ ಬಂಡವಾಳಶಾಹಿ ರಾಷ್ಟ್ರಗಳಿಗೆ ಪೈಪೋಟಿಯಲ್ಲಿ ಜಪಾನ್ ದೇಶವು ಸರಿಸಾಟಿ ಮಾತ್ರವಲ್ಲದೆ, ಅವುಗಳನ್ನು ಮೀರಿಸುವಷ್ಟು ಮುಂದುವರಿದಿದೆ. ವ್ಯಾಪಾರ ವ್ಯವಹಾರಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ಭಾರತವೂ ಸೇರಿದಂತೆ ಸಮಾಜವಾದಿಯೇತರ ಪೌರಾತ್ಯ ದೇಶಗಳನ್ನೆಲ್ಲಾ ತನ್ನ ಹೊಸ ವಸಾಹತುಗಳನ್ನಾಗಿ ಮಾಡಿಕೊಳ್ಳಲು ಜಪಾನ್ ಸತತ ಪ್ರಯತ್ನಿಸುತ್ತಿದೆ. ಆದರೆ, ಇತ್ತೀಚಿಗಿನ ವರುಷಗಳಲ್ಲಿ ಬಂಡವಾಳಶಾಹಿ ಪದ್ಧತಿಯ ಎಲ್ಲಾ ದುಃಸ್ಥಿತಿಗಳು ಜಪಾನ್ ದೇಶದಲ್ಲಿಯೂ ತಲೆ ಎತ್ತಿವೆ. ಜಪಾನ್ ಉತ್ಪಾದಿಸಿದ ಸಾಮುಗ್ರಿಗಳಿಗೆ ಆಂತರಿಕ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಗಳು ಕ್ಷೀಣಿಸುತ್ತಿವೆ. ಆರ್ಥಿಕ ಅಸಮಾನತೆ, ನಿರುದ್ಯೋಗ, ಬೆಲೆಏರಿಕೆ, ಹಣದುಬ್ಬರ, ಸಾಮಾಜಿಕ ಅಪರಾಧಗಳು ಹೆಚ್ಚುತ್ತಿವೆ. ಹಾಗೆಯೇ, ಕಾರ್ಮಿಕರ ಮತ್ತು ವಿದ್ಯಾರ್ಥಿ ಯುವಜನರ ಸಂಘಟಿತ ಹೋರಾಟಗಳೂ ತೀವ್ರವಾಗುತ್ತಿವೆ. ರಾಷ್ಟ್ರವ್ಯಾಪಿ ಮುಷ್ಕರಗಳೂ ಹೆಚ್ಚುತ್ತಿವೆ. ಜನರು ಹೆಚ್ಚು ಹೆಚ್ಚು ತೀವ್ರಗಾಮಿಗಳಾಗುತ್ತಿದ್ದಾರೆ. 25 ವರುಷಗಳಿಂದಲೂ ಅಧಿಕಾರದಲ್ಲಿದ್ದ ಆಳುವ ಪಕ್ಷವಾದ ಲಿಬರಲ್ ಡೆಮೊಕ್ರಾಟಿಕ್ ಪಾರ್ಟಿಯೂ ತನ್ನೊಳಗಿನ ಗುಂಪುಗಾರಿಕೆಯಿಂದಾಗಿ ದೇಶಕ್ಕೆ ಸುಬದ್ಧ ಸರಕಾರವನ್ನು ನೀಡಲು ಸೋಲುತ್ತಿದೆ. ವಿರೋಧಪಕ್ಷಗಳ ಸಮಾಜವಾದಿಗಳ ಪ್ರಭಾವವು ಕ್ಷಯಿಸುತ್ತಿದ್ದು, ಕಮ್ಯುನಿಸ್ಟರು ಪ್ರಬಲರಾಗುತ್ತಿದ್ದಾರೆ ಮತ್ತು ಜನಪ್ರಿಯರಾಗುತ್ತಿದ್ದಾರೆ.

ಲಿಬರಲ್ ಡೆಮೊಕ್ರಾಟಿಕ್ ಪಾರ್ಟಿಯ ನೇತೃತ್ವಕ್ಕಾಗಿ ನಡೆದ ತೀವ್ರ ಪೈಪೋಟಿಯಲ್ಲಿ ಫುಕುಡಾ ಅವರನ್ನು ಪಕ್ಷದಿಂದಲೂ ಪ್ರಧಾನಿ ಪಟ್ಟದಿಂದಲೂ ಪದಚ್ಯುತಗೊಳಿಸಿ ಕೇವಲ ಹತ್ತು ತಿಂಗಳ ಹಿಂದೆ ಓಹಿರಾ ಅವರು ಜಪಾನಿನ ಪ್ರಧಾನಿಯಾಗಿ ಅಧಿಕಾರಕ್ಕೆ ಬಂದಿದ್ದರು. ಕಳೆದ ಹಲವಾರು ವರುಷಗಳಿಂದ ತನ್ನ ಪಕ್ಷ ಜನಪ್ರಿಯತೆಗಳಿಸಿದೆ ಎಂಬ ನಂಬಿಕೆಯಿಂದ, ಪಾರ್ಲಿಮೆಂಟಿನ ಕೆಳ ಮನೆಯಲ್ಲಿ ತನಗೆ ನಿಚ್ಚಳ ಬಹುಮತಗಳಿಸಲು ಕೆಳ ಮನೆಯನ್ನು $1\frac{1}{2}$ ವರುಷಗಳ ಮುಂಚಿತವಾಗಿಯೇ ವಿಸರ್ಜಿಸಿ ಮಧ್ಯಕಾಲಿಕ ಚುನಾವಣೆಯನ್ನು ಘೋಷಿಸಿದರು. ಕೆಲವು ದಿನಗಳ ಹಿಂದೆ ನಡೆದ ಸಾರ್ವತ್ರಿಕ ಚುನಾವಣೆಯ ಪರಿಣಾಮ ಏನಾಯಿತು ? 540 ಸದಸ್ಯರುಳ್ಳ ಕೆಳಮನೆಯಲ್ಲಿ ಓಹಿರಾ ಅವರ ಪಕ್ಷವು 248 ರಷ್ಟೇ ಸ್ಥಾನಗಳನ್ನು ಪಡೆದು ನಿಚ್ಚಳ ಬಹುಮತಗಳಿಸುವುದರಲ್ಲಿ ಭಾರೀ ಸೋಲನ್ನು ಅನುಭವಿಸಿತು. ಆಳುವ ಪಕ್ಷವು ಇನ್ನಷ್ಟು ಜನಪ್ರಿಯತೆಯನ್ನು ಕಳೆದುಕೊಂಡಿತು. ಅತ್ಯಂತ ದೊಡ್ಡ ವಿರೋಧ ಪಕ್ಷವಾದ ಸಮಾಜವಾದಿಗಳ ಜನಪ್ರಿಯತೆಯೂ ಇಳಿಮುಖವಾಯಿತು. ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿ ಧೋರಣೆಗಳ ವಿರುದ್ಧ, ಬೆಲೆಏರಿಕೆ, ನಿರುದ್ಯೋಗ, ಭ್ರಷ್ಟಾಚಾರ, ವೇತನಸ್ಥಗಿತ ಮುಂತಾದ ಸಮಸ್ಯೆಗಳ ವಿರುದ್ಧ ಸಂಘಟಿತ ಹೋರಾಟ ನಡೆಸಿದ ಜಪಾನಿನ ಕಮ್ಯುನಿಸ್ಟ್ ಪಕ್ಷವು ಪಾರ್ಲಿಮೆಂಟಿನ ಕೆಳ ಮನೆಯಲ್ಲಿ ತನ್ನ ಸದಸ್ಯತ್ವವನ್ನು 19 ರಿಂದ 39 ಕ್ಕೇರಿಸಿಕೊಂಡಿತು ! ಕಮ್ಯುನಿಸ್ಟ್ ಪಕ್ಷದ ಜನಪ್ರಿಯತೆ ಹಾಗೂ ಪ್ರಾಬಲ್ಯ ಹೆಚ್ಚಿತು ! ಓಹಿರಾ ಅವರ ಪಕ್ಷವೇ ಪುನಃ ಜಪಾನ್‌ನಲ್ಲಿ ಕೆಲವೊಂದು ಸಣ್ಣಪುಟ್ಟ ಗುಂಪುಗಳ ಸಹಕಾರ ಪಡೆದು ಸರಕಾರ ರಚಿಸುವುದಾದರೂ, ಆ ಪಕ್ಷವು ನಿಚ್ಚಳ ಬಹುಮತ ಪಡೆಯದೇ ಇದ್ದುದರಿಂದಲೂ, ಕಮ್ಯುನಿಸ್ಟ್ ಪಕ್ಷದ ಬಲಹೆಚ್ಚಿದುದರಿಂದಲೂ ಮುಂದೆ ಸರಕಾರದ ಜನ ವಿರೋಧಿ ಹಾಗೂ ಕಾರ್ಮಿಕ ವಿರೋಧಿ ಧೋರಣೆಗಳ ವಿರುದ್ಧ ಪಾರ್ಲಿಮೆಂಟಿನ ಒಳಗೂ ಹೊರಗೂ ಹೆಚ್ಚು ಪರಿಣಾಮಕಾರಿಯಾಗಿ ಹೋರಾಡಬಹುದಾಗಿದೆ.

ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ರಾಷ್ಟ್ರಗಳಲ್ಲೆಲ್ಲಾ, ಮುಖ್ಯವಾಗಿ ಇಟೆಲಿ, ಫ್ರಾನ್ಸ್, ಸ್ಪೈನ್, ಪೋರ್ಚುಗಲ್, ಮುಂತಾದ ಪ. ಯೂರೋಪಿನ ರಾಷ್ಟ್ರಗಳಲ್ಲಿಯೂ ಕಮ್ಯುನಿಸ್ಟ್ ಪಕ್ಷವು ಪ್ರಬಲವಾದ ವಿರೋಧ ಪಕ್ಷವಾಗಿ ಬೆಳೆಯುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು. ಇಂಗ್ಲೇಂಡಿನಲ್ಲಿಯೂ ಇತ್ತೀಚಿಗೆ ಲೇಬರ್ ಪಾರ್ಟಿಯಲ್ಲಿ ತೀವ್ರಗಾಮಿಗಳದ್ದೇ ಮೇಲುಗೈ ಆಗುತ್ತಿದೆ. ಈ ಎಲ್ಲಾ ವಿದ್ಯಮಾನಗಳಿಂದ ಸ್ಪಷ್ಟವಾಗುವುದೇನೆಂದರೆ, ಬಂಡವಾಳಶಾಹಿಗಳು ಅಭಿವೃದ್ಧಿ ಹೊಂದಿದ ಅಥವಾ ಅಭಿವೃದ್ಧಿ ಹೊಂದುತ್ತಿರುವ ಯಾವುದೇ ದೇಶದಲ್ಲಿಯೂ ಜನರಿಗೆ ನಾಯಕತ್ವವನ್ನು ನೀಡಲು ಅಸಮರ್ಥರಾಗುತ್ತಿದ್ದಾರೆ. ಆರ್ಥಿಕ ಹಾಗೂ ರಾಜಕೀಯ ಅಸ್ಥಿರತೆಗಳನ್ನು ಸಾಮಾಜಿಕ ವಿರಸಗಳನ್ನು ಹೋಗಲಾಡಿಸಲು ವಿಫಲರಾಗುತ್ತಿದ್ದಾರೆ.

ನಮ್ಮ ದೇಶದ ಸಮಕಾಲೀನ ಪರಿಸ್ಥಿತಿಯಲ್ಲಿ ಮೇಲಿನ ವಿದ್ಯಮಾನಗಳು ಪಾರ್ಲಿಮೆಂಟಿಗೆ ನಡೆಯುವ ಮುಂದಿನ ನಡುಗಾಲದ ಚುನಾವಣೆಯಲ್ಲಿ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬೆಳೆಸಲು ಪ್ರಬಲಗೊಳಿಸಲು, ಸರ್ವಾಧಿಕಾರಿ ಹಾಗೂ ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಸ್ಫೂರ್ತಿಯಾದಾವು.

●

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಚುನಾವಣಾ ಪ್ರಣಾಳಿಕೆ

ಶಿಕ್ಷಣದಲ್ಲಿ ಬಿಕ್ಕಟ್ಟು

[ಕಳೆದ ಸಂಚಿಕೆಯಿಂದ ಮುಂದುವರೆದುದು]

ಕಾಂಗ್ರೆಸ್ಸಿನ ಆಳ್ವಿಕೆಯ ಕಾಲದಲ್ಲಿ ನಡೆದಂತೆ ಜನತಾ ಆಳ್ವಿಕೆಯ ಕಾಲದಲ್ಲೂ ತಿಂಗಳುಗಟ್ಟಲೆ ಕಾಲೇಜುಗಳು, ವಿಶ್ವವಿದ್ಯಾಲಯಗಳು ಮುಚ್ಚಿರುತ್ತಿದ್ದವು. ವಿಶ್ವವಿದ್ಯಾಲಯಗಳ ಆವರಣದಲ್ಲಿ ಬರೀ ಪೋಲೀಸರೇ ತುಂಬಿರುತ್ತಿದ್ದರು. ಶಿಕ್ಷಕರು-ವಿದ್ಯಾರ್ಥಿಗಳನ್ನದೆ ಎಲ್ಲರನ್ನು ಬಂಧಿಸಲಾಗುತ್ತಿತ್ತು. ಸಾವಿರಾರು ವಿದ್ಯಾರ್ಥಿಗಳು ತಮ್ಮ ವಾರ್ಷಿಕ ಪರೀಕ್ಷೆಗಳಿಗೆ ಕೂರಲಾಗುತ್ತಿಲ್ಲ. ಪರೀಕ್ಷೆಗಳ ಫಲಿತಾಂಶಗಳನ್ನು ತಿಂಗಳುಗಟ್ಟಲೆ ಮುಂದೂಡಲಾಗುತ್ತಿತ್ತು. ಪರೀಕ್ಷೆಗಳಲ್ಲಿ ಪಕ್ಷಪಾತವನ್ನು ಕೆಲ ವಿದ್ಯಾರ್ಥಿಗಳ ಪರ ತೋರಿಸಲಾಗುತ್ತಿತ್ತು.

ಇಡೀ ಶಿಕ್ಷಣ ರಂಗವೇ ಇಂದು ತೀವ್ರ ರೀತಿಯ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದೆ. ಕಾಂಗ್ರೆಸ್ಸಿನ 30 ವರ್ಷಗಳ ಆಳ್ವಿಕೆಯ ಕಾಲದಲ್ಲಿ ಅನುಸರಿಸಲಾದ ಶೈಕ್ಷಣಿಕ ನೀತಿಯನ್ನೇ ಜನತಾ ಪಕ್ಷದವರೂ ಅನುಸರಿಸಿದ ಕಾರಣದಿಂದಾಗಿ ಇಂದು ಶಿಕ್ಷಣ ರಂಗದಲ್ಲಿ ಈ ಬಿಕಟ್ಟು ನಿರ್ಮಾಣವಾಗಿದೆ. ಪ್ರಜಾಸತ್ತಾತ್ಮಕವೂ, ವೈಜ್ಞಾನಿಕವೂ ಮತ್ತು ಎಲ್ಲರಿಗೂ ಸಮಾನ ಅವಕಾಶವಿರುವಂತಹ ಶಿಕ್ಷಣವು ನಮ್ಮ ನಾಡಿನ ಜನತೆಗೆ ದೊರೆಯುವುದು ಇನ್ನೂ ದೂರದ ಮಾತಾಗಿಯೇ ಉಳಿದಿದೆ. 14 ವರ್ಷಗಳವರೆಗಿನ ಶಿಕ್ಷಣ ಸೌಲಭ್ಯವನ್ನು ಎಲ್ಲರಿಗೂ ಕಡ್ಡಾಯವಾಗಿ ಹಾಗೂ ಉಚಿತವಾಗಿ ನೀಡಬೇಕೆಂದು ನಮ್ಮ ರಾಜ್ಯಾಂಗದಲ್ಲಿ ಒಪ್ಪಲಾಗಿದ್ದರೂ ಅದನ್ನು ಸಾಧಿಸುವಲ್ಲಿ ರಾಷ್ಟ್ರವು ತೃಪ್ತಿಕರ ಹೆಜ್ಜೆಯನ್ನು ಇಟ್ಟೇ ಇಲ್ಲ ಎಂದು ಹೇಳಬೇಕಾಗಿದೆ. ಶಿಕ್ಷಣದಲ್ಲಿ ಬೋಧಿಸಲಾಗುತ್ತಿರುವ ಪಾಠ ಪ್ರವಚನಗಳು ರಾಷ್ಟ್ರದ ದುಡಿಯುವ ಜನತೆಗೆ ಯಾವ ಸಂಬಂಧವೂ ಇಲ್ಲವೆಂಬಂತೆ ಮತ್ತು ದೇಶದ ಅಭಿವೃದ್ಧಿಗೆ ತಕ್ಕವಾಗಿಲ್ಲದ ಹಾಗೆ ಇವೆ. ಪ್ರಾಥಮಿಕ ತರಗತಿಗೆ ಸೇರಿಕೊಳ್ಳುವ ಮಕ್ಕಳಲ್ಲಿ ಬಹುಪಾಲು ಮಕ್ಕಳು ಬಡತನದ ಕಾರಣದಿಂದಾಗಿ ಪ್ರಾಥಮಿಕ ಹಂತದಲ್ಲೇ ಶಾಲೆಯನ್ನು ಬಿಟ್ಟುಬಿಡುತ್ತಾರೆ. ಮಾಧ್ಯಮಿಕ ತರಗತಿಗಳ ಮಟ್ಟಕ್ಕೆ ಹೋದ ಕೆಲವರೂ ಮುಂದೆ ಪ್ರೌಢಶಾಲೆಗೆ ಹೋಗದೆ ಅಲ್ಲಿಗೇ ತಮ್ಮ ವಿದ್ಯಾಭ್ಯಾಸ ನಿಲ್ಲಿಸುತ್ತಾರೆ. ಇದಕ್ಕೂ ಅವರ ಬಡತನವೇ ಕಾರಣವಾಗಿದೆ. ಉದ್ಯೋಗ ನೀಡುವಲ್ಲಿ ವಿಫಲವಾಗಿರುವ ಈ ಸರ್ಕಾರವು ಈಗ ಪ್ರೌಢ ಶಿಕ್ಷಣಕ್ಕೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದರಲ್ಲೇ ವಿಪರೀತ ಕಡಿತವನ್ನು ಶುರು ಮಾಡಿದ್ದಾರೆ. ಕಳೆದ ಎರಡು ವರ್ಷಗಳಲ್ಲಿ ಮತೀಯ ಶಿಕ್ಷಣವನ್ನು ಮಕ್ಕಳಿಗೆ ಕೊಡಲು ಜಾತೀಯ ಹಿಂದೂಗಳ ಕೆಲ ಶಕ್ತಿಗಳು ಪ್ರಯತ್ನಪಟ್ಟವೆ.

ಶಿಕ್ಷಣ ರಂಗದಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕೆಂಬುದು ಸಿ. ಪಿ. ಐ. (ಎಂ)ನ ನಿಲುವು. ಶಿಕ್ಷಣ ಮಾಧ್ಯಮವು ಎಲ್ಲ ಹಂತಗಳಲ್ಲೂ ವಿದ್ಯಾರ್ಥಿಯ ಮಾತೃಭಾಷೆಯಾಗಿರಬೇಕೆಂದೂ ನಮ್ಮ ಪಕ್ಷದ ನಿಲುಮೆಯಾಗಿದೆ. ವೈಜ್ಞಾನಿಕವೂ, ಪ್ರಜಾಸತ್ತಾತ್ಮಕವೂ ಮತ್ತು ಉದ್ಯೋಗ ಆಧಾರಿತ ಶಿಕ್ಷಣವನ್ನು ನಾಡಿನ ಮಕ್ಕಳಿಗೆ ನೀಡಬೇಕೆಂದು ನಾವು ಬಯಸುತ್ತೇವೆ. ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯದವರೆಗೆ ಎಲ್ಲ ಮಕ್ಕಳಿಗೂ ಕಡ್ಡಾಯ ಹಾಗೂ ಉಚಿತ ಶಿಕ್ಷಣ ನೀಡಬೇಕೆಂಬುದು ನಮ್ಮ ಒತ್ತಾಯ. ಶಿಕ್ಷಣವು ಸಂಪೂರ್ಣವಾಗಿ ರಾಜ್ಯಕ್ಕೆ ಸಂಬಂಧಿಸಿದ ವಿಷಯವಾಗಿರಬೇಕು ಮತ್ತು ಇದರಲ್ಲಿ ಕೇಂದ್ರದ ಹಸ್ತಕ್ಷೇಪ ಇರಬಾರದು ಎಂದು ನಮ್ಮ ನಿಲುವು. ಈಗಿರುವ ಖಾಸಗಿ ವಿದ್ಯಾಸಂಸ್ಥೆಗಳನ್ನು ರಾಷ್ಟ್ರೀಕರಿಸಿ ಶಿಕ್ಷಣ ಆಡಳಿತದ ಎಲ್ಲ ಹಂತಗಳಲ್ಲಿ ವಿದ್ಯಾರ್ಥಿಗಳ, ಶಿಕ್ಷಕರ ಮತ್ತು ನೌಕರರ ಪಾಲ್ಗೊಳ್ಳುವಿಕೆಗಾಗಿ ನಾವು ಹೋರಾಡುತ್ತೇವೆ.

ಮೂರು ಬಣಗಳು :

ಜನತಾಪಕ್ಷದಲ್ಲಿನ ಒಡಕು ಲೋಕದಳ ಎಂಬ ಹೊಸ ಪಕ್ಷದ ಉದಯಕ್ಕೆ ಕಾರಣವಾಯಿತು. ಜನತಾಪಕ್ಷದೊಳಗೇ ಇದ್ದ ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳು ಆರ್‌ಎಸ್‌ಎಸ್ ಮತ್ತು ಅದರ ಮತೀಯ ಸಿದ್ಧಾಂತದ ವಿರುದ್ಧ ಎದ್ದು ನಿಂತು ಜನತಾಪಕ್ಷದಲ್ಲಿ ಅವಳಿ ಸದಸ್ಯತ್ವವನ್ನು ಕೂಡಲೇ ಕೊನೆಗಾಣಿಸಬೇಕೆಂದು ಹಠ ಹಿಡಿದವು. ಆರ್. ಎಸ್. ಎಸ್. ಹಿಡಿತಕ್ಕೆ ಹೋಗಿದ್ದ ಜನತಾಪಕ್ಷವನ್ನು ತೊರೆದು ಈ ಶಕ್ತಿಗಳು ಕಡೆಗೆ ಹೊರ ಬರಬೇಕಾಯಿತು.

ಜನತಾ ಪಕ್ಷದೊಳಗೇ ಇದ್ದ ಮತ್ತೊಂದು ಘಟಕವೂ (ಸಿ. ಎಫ್. ಡಿ.) ಸಹ ಇದೇ ಅನುಭವವನ್ನು ಪಡೆದು ಜನತಾಪಕ್ಷ ತೊರೆದು ಹೊರಬಂದಿತು.

ಈ ಎರಡೂ ಘಟಕಗಳು ಸೇರಿ ಲೋಕದಳ ಎಂಬ ಹೊಸಪಕ್ಷ ರಚಿಸಿದವು (ಸಿ. ಎಫ್. ಡಿ. ಇನ್ನೂ ಲೋಕದಳದಲ್ಲಿ ವಿಲೀನಗೊಂಡಿಲ್ಲ-ಅನು.)

ಜನತಾಪಕ್ಷದೊಳಗಿನಿಂದಲೇ ಎದ್ದು ಬಂದ ಜಾತ್ಯಾತೀತ ಶಕ್ತಿಗಳ ಬಂಡಾಯ ಮತ್ತು ಇದೇ ಸಮಯದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಆದ ಕೆಲವು ಪ್ರಮುಖ ಬೆಳವಣಿಗೆಗಳು (ಇಂದಿರಾ ಗಾಂಧಿ ವಿರುದ್ಧ ಅರಸು ಬಂಡಾಯ) ದೇಶದಲ್ಲಿ ಹೊಸದೊಂದು ಸನ್ನಿವೇಶವನ್ನು ನಿರ್ಮಾಣ ಮಾಡಿದವು. ಈ ಹೊಸ ಸನ್ನಿವೇಶದಡಿ ರಾಷ್ಟ್ರದಲ್ಲಿ ಇದುವರೆಗೂ ಇದ್ದ ಎರಡು ಮುಖ್ಯ ಪಕ್ಷಗಳ ಬದಲಾಗಿ ಮೂರು ಪಕ್ಷಗಳ ಬಣ ನಿರ್ಮಾಣವಾಯಿತು. ಈ ಮೂರೂ ಬಣಗಳು (ಇಂದಿರಾ ಕಾಂಗ್ರೆಸ್ ಜನತಾಪಕ್ಷ ಲೋಕದಳ ಮತ್ತು ಕಾಂಗ್ರೆಸ್ ಮೈತ್ರಿಕೂಟ) ಈಗ ಅಧಿಕಾರ ಗದ್ದುಗೆಯೇರಲು ಜನತೆಯ ಮತ ಯಾಚಿಸಿ ರಾಷ್ಟ್ರದ ಏಳನೇ ಸಾರ್ವತ್ರಿಕ ಚುನಾವಣೆಯ ಕಣಕ್ಕೆ ಇಳಿದಿವೆ.

ಒಂದು ಕಡೆ ಕಾಂಗ್ರೆಸ್ (ಐ) ಪಕ್ಷದವರು ತಮ್ಮ ಹಿಂದಿನ ಯಾವ ತಪ್ಪುಗಳನ್ನೂ ಮನ್ನಿಸುತ್ತಿಲ್ಲ. ಜನತೆಯ ಕ್ಷಮೆ ಕೇಳುತ್ತಿಲ್ಲ. ಬದಲಾಗಿ ತಾವು ಹೇರಿದ್ದ ತುರ್ತುಪರಿಸ್ಥಿತಿಯನ್ನು ಸಮರ್ಥಿಸುತ್ತಿದ್ದಾರೆ. ಜೊತೆಗೆ ರಾಷ್ಟ್ರಕ್ಕೆ ಸುಭದ್ರ ಸರ್ಕಾರವೊಂದನ್ನು ನೀಡಲು ತಮ್ಮ ಪಕ್ಷದಿಂದ ಮಾತ್ರ ಸಾಧ್ಯ ಎಂದು ಅವರು ಹೇಳುತ್ತಿದ್ದಾರೆ. ಜನತಾ ಪಕ್ಷವು ರಾಷ್ಟ್ರಕ್ಕೆ ಅಭದ್ರತೆಯನ್ನು ತಂದಿತು ಎಂದವರು ಹೇಳುತ್ತಿದ್ದಾರೆ.

ಇನ್ನೊಂದು ಕಡೆ ಜನತಾಪಕ್ಷ. ಆ ಪಕ್ಷದಲ್ಲಿ ಇನ್ನೂ ಕೆಲವು ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳು ಉಳಿದಿವೆ. ಇವರೆಂದರೆ ಸಂಸ್ಥಾ ಕಾಂಗ್ರೆಸ್ಸಿಗರು, ಜಗಜೀವನ್‌ರಾಮ್ ನೇತೃತ್ವದ ಸಿ. ಎಫ್. ಡಿ. ಯ ಒಂದು ಬಣ. ಆದರೆ ಇವರೆಲ್ಲರು ಆರ್. ಎಸ್. ಎಸ್. ಜನಸಂಘೀಯರು ತಮ್ಮ ಕಪಿಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದುಕೊಂಡಿರುವ ಜನತಾಪಕ್ಷದೊಳಗೆ ಇದ್ದಾರೆ.

ಇವರಿಬ್ಬರನ್ನೂ ವಿರೋಧಿಸಿ ಲೋಕದಳ ಮತ್ತು ಕಾಂಗ್ರೆಸ್ಸಿಗರು ಮತ್ತೊಂದು ಕಡೆ ನಿಂತಿದ್ದಾರೆ. ಲೋಕದಳದವರು ಮತ್ತು ಕಾಂಗ್ರೆಸ್ಸಿಗರು ಇಂದಿರಾ ಕಾಂಗ್ರೆಸ್ಸಿನ ಸರ್ವಾಧಿಕಾರಿ ಶಕ್ತಿಗಳನ್ನೂ ಮತ್ತು ಜನತಾಪಕ್ಷದ ಕೋಮುವಾದಿಗಳನ್ನೂ ಎದುರಿಸಿ ನಿಂತಿದ್ದಾರೆ.

ಲೋಕದಳ ಮತ್ತು ಕಾಂಗ್ರೆಸ್ ಮೈತ್ರಿಕೂಟವನ್ನು ಬೆಂಬಲಿಸಿ :

ಕಾಂಗ್ರೆಸ್ (ಐ) ನೇತೃತ್ವದ ಸರ್ವಾಧಿಕಾರಿ ಶಕ್ತಿಗಳನ್ನು ಜನತಾಪಕ್ಷದ ನೇತೃತ್ವದ ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಒಂದಾಗಿ ನಿಂತಿರುವ ಲೋಕದಳ ಮತ್ತು ಕಾಂಗ್ರೆಸ್ ಪಕ್ಷಗಳ ಮೈತ್ರಿಕೂಟವನ್ನು ಬೆಂಬಲಿಸಲು ಮತ್ತು ಇವರನ್ನು ಆಯ್ಕೆಮಾಡಿ ಎಂದು ಜನತೆಗೆ ಕರೆ ಕೊಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಯಾವ ಹಿಂಜರಿಕೆಯೂ ಇಲ್ಲ. ಇತರೆ ಎಡ ರಾಜಕೀಯ ಪಕ್ಷಗಳು ಮತ್ತು ಪ್ರಜಾಪ್ರಭುತ್ವವಾದಿಗಳು ಇದೇ ಅಭಿಪ್ರಾಯವನ್ನು ತಳೆದಿವೆ ಎಂಬುದು ಇಲ್ಲಿ ಸಂತೋಷದಿಂದ ಗುರುತಿಸಬಹುದು.

ಲೋಕದಳ ಮತ್ತು ಕಾಂಗ್ರೆಸ್ ಪಕ್ಷದ ಮೈತ್ರಿಕೂಟದ ರಾಜಕೀಯ ಮಿತಿಗಳ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಸ್ಪಷ್ಟ ಪ್ರಜ್ಞೆ ಇದೆ. ಈ ಮೈತ್ರಿಕೂಟದಲ್ಲಿನ ಹಲವಾರು ನಾಯಕರುಗಳು ಸರ್ವಾಧಿಕಾರಿ ಕಾಂಗ್ರೆಸ್ಸಿನಲ್ಲಿ ಮತ್ತು ಆನಂತರದ ಜನತಾಪಕ್ಷದಲ್ಲಿ ಸದಸ್ಯರಾಗಿದ್ದವರೇ ಆಗಿದ್ದಾರೆ. ಈ ಮೈತ್ರಿಕೂಟವು ಅಧಿಕಾರಕ್ಕೆ ಬಂದಾಗ ಎಂತಹ ಆರ್ಥಿಕ ನೀತಿಗಳನ್ನು ಅಳವಡಿಸುತ್ತಾರೆ ಎಂಬ ಬಗ್ಗೆ ಎಲ್ಲ ವಾಮಪಂಥೀಯರಿಗೆ ಮತ್ತು ಪ್ರಜಾಪ್ರಭುತ್ವವಾದಿಗಳಿಗೆ ಸ್ಪಷ್ಟ ತಿಳುವಳಿಕೆ ಇರಬೇಕು.

ಹೀಗಿದ್ದರೂ ಸಹ ಸಿ. ಪಿ. ಐ. (ಎಂ), ಒಂದು ವಿಷಯದ ಬಗ್ಗೆ ಚೆನ್ನಾಗಿ ಚಿಂತಿಸಿದೆ. ಇಂದು ಸರ್ವಾಧಿಕಾರವನ್ನು ಪ್ರತಿನಿಧಿಸುವ ಕಾಂಗ್ರೆಸ್ (ಐ) ವಿರುದ್ಧ ಮತ್ತು ಕೋಮುವಾದವನ್ನು ಪ್ರತಿನಿಧಿಸುವ ಜನತಾಪಕ್ಷದ ವಿರುದ್ಧ ಲೋಕದಳ ಮತ್ತು ಕಾಂಗ್ರೆಸ್ ಮೈತ್ರಿಕೂಟ ಹೋರಾಡುತ್ತಿರುವುದು ನಮಗೆ ಸ್ಪಷ್ಟವಾಗಿ ಕಾಣಿಸುತ್ತಿದೆ. ಜನತೆಯ ಬದ್ಧ ವೈರಿಗಳಿಂದ ಮತ್ತು ರಾಷ್ಟ್ರದ ಅನಿಷ್ಟಗಳಿಂದ ಈ ಎರಡು ಶಕ್ತಿಗಳನ್ನು ಏನಾದರೂ ಮಾಡಿ, ಎಷ್ಟಾದರೂ ಬೆಲೆ ತೆತ್ತು ಸೋಲಿಸಬೇಕಾದುದು ಇಂದಿನ ತುರ್ತು ಕರ್ತವ್ಯವಾಗಿರುವುದರಿಂದ ಜನರು ಲೋಕದಳ ಮತ್ತು ಕಾಂಗ್ರೆಸ್ ಮೈತ್ರಿಕೂಟವನ್ನು ಬೆಂಬಲಿಸಬೇಕೆಂದು ನಾವು ಕೇಳುತ್ತೇವೆ. ದುಡಿಯುವ ಜನರ ಹಿತಾಸಕ್ತಿಗಳಿಗಾಗಿ, ವಾಮಪಂಥೀಯ ಚಳುವಳಿಯ ಬೆಳವಣಿಗೆಗಾಗಿ ನಾವು ಈ ಮೈತ್ರಿಕೂಟ ಅಧಿಕಾರಕ್ಕೆ ಬರುವಂತೆ ಮಾಡಬೇಕು. ಚುನಾವಣೆಯಲ್ಲಿ ಈ ಮೈತ್ರಿಕೂಟ ಅಧಿಕಾರಕ್ಕೆ ಬಂದುದಾದಲ್ಲಿ ಅದು ಸರ್ವಾಧಿಕಾರಿ ಶಕ್ತಿಗಳಿಗೆ ಮತ್ತು ಮತೀಯವಾದಿ ಶಕ್ತಿಗಳಿಗೆ ಬಲವಾದ ಪೆಟ್ಟುಕೊಟ್ಟಂತೆ ಆಗುತ್ತದೆ.

ಎಡರಂಗ ಸರ್ಕಾರಗಳ ಸಾಧನೆ :

ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿನ ತನ್ನ ಸಂಪುಟಗಳ ಸಾಧನೆಗಳನ್ನು ಜನತೆಯ ಮುಂದಿಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಹೆಮ್ಮೆಯಾಗುತ್ತದೆ. ಈ ಎರಡೂ ರಾಜ್ಯಗಳ ಸರ್ಕಾರಗಳ ಸಾಧನೆಯನ್ನು ಜನತಾ ಮತ್ತು ಕಾಂಗ್ರೆಸ್ ಪಕ್ಷಗಳ ರಾಜ್ಯ ಸರ್ಕಾರಗಳೊಡನೆ ಯಾರು ಬೇಕಾದರೂ ಹೋಲಿಸಿ ನೋಡಲಿ.

ನಮ್ಮ ಪಕ್ಷವು ಸರ್ಕಾರ ರಚಿಸಿದ ಪ್ರಾರಂಭದಿಂದಲೇ ಪಶ್ಚಿಮ ಬಂಗಾಳ ರಾಜ್ಯದ ಜನತೆಯ ಎಲ್ಲ ಪ್ರಜಾಸತ್ತಾತ್ಮಕ ಹಕ್ಕುಗಳೂ ಅವರಿಗೆ ಮರಳಿ ಸಿಕ್ಕಿವೆ. ಜನತೆಯ ಹೋರಾಟಗಳಲ್ಲಿ ಪೋಲೀಸರು ಹಸ್ತಕ್ಷೇಪ ನಡೆಸುವುದನ್ನು ಅಲ್ಲಿ ನಿಲ್ಲಿಸಲಾಗಿದೆ ಮತ್ತು ಮುಷ್ಕರದ ಹಕ್ಕನ್ನು ಅಲ್ಲಿನ ಜನತೆಗೆ ಪೂರ್ಣವಾಗಿ ಕೊಡಲಾಗಿದೆ. ಕಾರ್ಮಿಕರ ಬೋನಸ್ ಹೋರಾಟ, ಕೂಲಿ ಹೆಚ್ಚಳದ ಹೋರಾಟಗಳಿಗೆ ಅಲ್ಲಿನ ಸರ್ಕಾರವೇ ಕಾರ್ಮಿಕರ ಪರ ನಿಂತು ಕ್ರಮವಹಿಸಿತು. ಸೆಣಬು ಕೈಗಾರಿಕೆಯ ಮಾಲೀಕರುಗಳ ಪ್ರತಿರೋಧವನ್ನು ಸರ್ಕಾರ ಸಹಿಸಲಿಲ್ಲ. ಸೆಣಬು ಕಾರ್ಖಾನೆಯ ಕಾರ್ಮಿಕರಿಗೆ ಹೆಚ್ಚು ವೇತನ ಕೊಡಿಸಲಾಯಿತು. ಪಶ್ಚಿಮ ಬಂಗಾಳದ ಸರ್ಕಾರಿ ನೌಕರರು ಸಂಘ ರಚಿಸುವ ಹಕ್ಕನ್ನು ಕೊಟ್ಟಿತು ಮತ್ತು ಸರ್ಕಾರಿ ನೌಕರರ ಸಂಘಕ್ಕೆ ಮಾನ್ಯತೆ ನೀಡಿತು. ಕಳೆದ 10 ವರ್ಷಗಳ ಅವಧಿಯಲ್ಲಿ ಕೆಲಸದಿಂದ ಕಿತ್ತುಹಾಕಲ್ಪಟ್ಟಿದ್ದ ಎಲ್ಲ ನೌಕರರನ್ನು ಸಂಬಳ ಸಹಿತ ಕೆಲಸಕ್ಕೆ ಪುನಃ ನೇಮಿಸಿಕೊಳ್ಳಲಾಯಿತು.

ವ್ಯವಸಾಯ ರಂಗದಲ್ಲಿ ಪಶ್ಚಿಮ ಬಂಗಾಳದ್ದು ಗಮನಾರ್ಹ ಸಾಧನೆ. ಜಮೀನ್ದಾರರ ವಿರುದ್ಧ ಎಲ್ಲ ಗೇಣಿದಾರರಿಗೂ ಅವರ ಗೇಣಿ ಹಕ್ಕನ್ನು ಕೊಡಿಸುವ ಕೆಲಸವನ್ನು ಅತ್ಯಂತ ನಿಷ್ಠೆಯಿಂದ ಜಾರಿಮಾಡಲಾಯಿತು. 1979 ರಲ್ಲಿ ಪಾಸು ಮಾಡಲಾದ ಜಮೀನು ಹಿಡುವಳಿ ಶಾಸನವು ಭೂಸುಧಾರಣೆಯಲ್ಲಿ ಅತ್ಯಂತ ಪ್ರಗತಿಪರ ಹೆಜ್ಜೆಯಾಗಿದೆ. ಪಶ್ಚಿಮ ಬಂಗಾಳ ರಾಜ್ಯದಲ್ಲಿ ಕಂದಾಯ ಪದ್ಧತಿಯನ್ನು ರಾಷ್ಟ್ರದಲ್ಲೇ ಅತ್ಯಂತ ಪ್ರಗತಿದಾಯಕ ಪಥದಲ್ಲಿ ತರಲಾಗಿದೆ. 50,000 ರೂ. ವರೆಗಿನ ಹಿಡುವಳಿದಾರರಿಗೆ (5 ಎಕರೆ) ಕಂದಾಯವನ್ನು ಈ ರಾಜ್ಯದಲ್ಲಿ ರದ್ದು ಮಾಡಲಾಗಿದೆ. ಸಿರಿವಂತ ರೈತರು ಅವರು ಬೆಳೆದ ಬೆಳೆಯ ಪ್ರಮಾಣಕ್ಕೆ ಅನುಸಾರವಾಗಿ ರಾಜ್ಯ ಸರ್ಕಾರಕ್ಕೆ ತೆರಿಗೆ ಕೊಡಬೇಕು. ಹೀಗೆ ಸಿರಿವಂತರು ಕ್ರೋಢೀಕರಿಸುವ ಹೆಚ್ಚು ಹಣವು ರಾಷ್ಟ್ರ ನಿರ್ಮಾಣಕ್ಕೆ ಮತ್ತೆ ಬರುತ್ತದೆ.

ರೈತ ಜನಾಂಗವು ಎಡರಂಗ ಸರ್ಕಾರದ ಮೇಲೆ ಇಟ್ಟಿರುವ ಅಗಾಧ ನಂಬಿಕೆಯನ್ನು ಅವರು ಕಿಸಾನ್ ಸಭಾವನ್ನು ಅತಿಹೆಚ್ಚು ಸಂಖ್ಯೆಯಲ್ಲಿ ಸೇರುತ್ತಿರುವುದು ತೋರಿಸುತ್ತದೆ.

ಸಾಮೂಹಿಕ ಸಂಘಟನೆಗಳನ್ನು ದಮನ ಮಾಡುವುದರಿಂದ ತಮ್ಮ ಸುರಕ್ಷತೆ ಸಾಧ್ಯ ಎಂದು ಜನತಾ ಮತ್ತು ಕಾಂಗ್ರೆಸ್ ಪಕ್ಷದ ಸರ್ಕಾರಗಳು ನಂಬುತ್ತವೆ. ಆದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸಾಮೂಹಿಕ ಸಂಘಟನೆಗಳನ್ನು ಬಲಪಡಿಸುವುದರಲ್ಲಿ ನಂಬಿಕೆ ಇಟ್ಟಿದೆ. ಸಾಮೂಹಿಕ ಸಂಘಟನೆಗಳು ಶಕ್ತಗೊಳ್ಳುವುದರಿಂದಲೇ ಸಮಾಜದಲ್ಲಿನ ಕೆಳವರ್ಗಗಳ ಉನ್ನತಿ ಸಾಧ್ಯ ಎಂದು ನಾವು ನಂಬುತ್ತೇವೆ.

'ಕೂಲಿಗಾಗಿ ಕಾಳು' ಕಾರ್ಯಕ್ರಮವು ಗ್ರಾಮೀಣ ಬಡಜನರಿಗೆ ತುಂಬಾ ಸಹಾಯಕಾರಿ. ಪಶ್ಚಿಮ ಬಂಗಾಳ ಸರ್ಕಾರ ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಿದಷ್ಟು ಮತ್ತಾವುದೇ ಸರ್ಕಾರ ಮಾಡಿದೆಯೇನು ? ಪಶ್ಚಿಮ ಬಂಗಾಳ ರಾಜ್ಯ ಅನುಭವಿಸಿದಷ್ಟು ಭೀಕರ ಪ್ರವಾಹವನ್ನು ಬೇರಾವುದೇ ರಾಜ್ಯ ಅನುಭವಿಸಿಲ್ಲ. ಪ್ರವಾಹ ಪೀಡಿತರಿಗೆ ಅತಿ ಶೀಘ್ರದಲ್ಲಿ ನೆರವಾದ ಪಶ್ಚಿಮ ಬಂಗಾಳ ಸರ್ಕಾರದಂತ ಬೇರಾವುದೇ ಸರ್ಕಾರವಿದೆಯೇ ? ಸಂತ್ರಸ್ತ ಜನತೆಗಾಗಿ ಹಗಲು ರಾತ್ರಿ ದುಡಿಯುವಂತೆ ರಾಜ್ಯದ ಸರ್ಕಾರಿ ನೌಕರರನ್ನು ಸ್ಫೂರ್ತಿಗೊಳಿಸಿದ್ದರಿಂದಲೇ ಇದು ಸಾಧ್ಯವಾಯಿತು. ಪ. ಬಂಗಾಳದ ಪಂಚಾಯತ್ ಚುನಾವಣೆಗಳಲ್ಲಿ ಸಿ. ಪಿ. ಐ. (ಎಂ)ಗೆ ಪ್ರಚಂಡ ಗೆಲವು ಬಂದಿದ್ದರಲ್ಲಿ ಆಶ್ಚರ್ಯವೇನಿಲ್ಲ. ಆಸಕ್ತಹಿತಗಳನ್ನು ಮತ್ತು ಇವುಗಳನ್ನು ರಕ್ಷಿಸುವ ಕಾಂಗ್ರೆಸ್(ಐ)ಪಕ್ಷವನ್ನು ನಾವು ಪಟ್ಟಭದ್ರರ ವಿರುದ್ಧ ಹೋರಾಡುವ ಮುಖಾಂತರ ನಿಗ್ರಹಿಸಿದ್ದೇವೆ. ಮತೀಯವಾದಿಗಳು ನಮ್ಮ ರಾಜ್ಯಕ್ಕೆ ಹೆಜ್ಜೆ ಇಡದಂತೆ ನಾವು ಜನಪರ ಹೋರಾಟಗಳನ್ನು ಮಾಡಿದ್ದೇವೆ.

ದೀರ್ಘಕಾಲದ ಬುಡಕಟ್ಟು ಜನತೆಯ ಬೇಡಿಕೆಯ ಈಡೇರಿಕೆ:

ಬಹಳ ಕಷ್ಟದ ಸನ್ನಿವೇಶದಡಿಯಲ್ಲಿ ಕೆಲಸ ಮಾಡಬೇಕಾಗಿ ಬಂದ ನಮ್ಮ ತ್ರಿಪುರ ಸರ್ಕಾರದ್ದೂ ಒಂದುಹೆಮ್ಮೆಯ ಸಾಧನೆಯೇ ಆಗಿದೆ. ಸ್ವಯಂ ಅಧಿಕಾರವುಳ್ಳ ಬುಡಕಟ್ಟು ಜನತೆಯ ಜಿಲ್ಲಾ ಬೇಡಿಕೆಯೊಂದನ್ನು ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದ ನಂತರ ಈಡೇರಿಸಲಾಯಿತು. ನಮ್ಮ ಸರ್ಕಾರವು ಈ ನಿಟ್ಟಿನಲ್ಲಿ ಇನ್ನೂ ಮುಂದೆ ಹೋಗಬೇಕೆಂದು ಬಯಸಿತ್ತು. ಆದರೆ ನಮ್ಮ ಸಂವಿಧಾನದಲ್ಲಿ ಇದಕ್ಕೆ ಅವಕಾಶವಿಲ್ಲ.

ಈ ಹಿಂದೆ ಇದ್ದ ಯಾವ ಸರ್ಕಾರಗಳೂ ಇಂತಹುದೊಂದು ಬೇಡಿಕೆಯ ಈಡೇರಿಕೆಯ ಬಗ್ಗೆ ಚಿಂತಿಸುವುದೂ ಸಾಧ್ಯವಿರುತ್ತಿರಲಿಲ್ಲ. ಆದರೆ ಈಗ ಕಾಂಗ್ರೆಸ್ಸಿಗರು, ಜನತಾದವರೂ ಬಂಗಾಲಿ ಜನರನ್ನು ಬುಡಕಟ್ಟು ಜನರ ವಿರುದ್ಧ ಎತ್ತಿಕಟ್ಟುವ,ನಮ್ಮ ಸರ್ಕಾರದ ವಿರುದ್ಧ ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ.

ಬುಡಕಟ್ಟು ಜನಾಂಗದ ಜನತೆಯ ಭೂಮಿಯನ್ನು ಅವರಿಗೆ ವಾಪಸ್ಸುಕೊಡಿಸಲು, ಅವರ ವಿದ್ಯಾಭ್ಯಾಸಕ್ಕಾಗಿ ಮತ್ತು ಬುಡಕಟ್ಟು ಜನಾಂಗದವರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಆದ್ಯತೆ ಕೊಡಲು ನಮ್ಮ ಸರ್ಕಾರವು ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ.

ಈ ಹಿಂದೆ ನಮ್ಮ ಪಕ್ಷವು ಚುನಾವಣೆ ಪ್ರಣಾಳಿಕೆಯಲ್ಲಿ ತ್ರಿಪುರ ಜನತೆಗೆ ನೀಡಿದ್ದ ಆಶ್ವಾಸನೆಗಳನ್ನೆಲ್ಲ ಈಡೇರಿಸುವಲ್ಲಿ ನಾವು ಸಫಲರಾಗಿದ್ದೇವೆ. ಸರ್ಕಾರಿ ಜಮೀನನ್ನು ಬುಡಕಟ್ಟು ಜನಾಂಗದವರಿಗೆ ಕೊಡಿಸುವಲ್ಲಿ ನಾವು ಸಫಲರಾಗಿದ್ದೇವೆ. ಸಣ್ಣ ರೈತರು ಸರ್ಕಾರಕ್ಕೆ ಕಂದಾಯವನ್ನು ಕೊಡದ ಹಾಗೆ ಮಾಡಿದ್ದೇವೆ. ಸಣ್ಣ ಮತ್ತು ಮಧ್ಯಮ ವರ್ಗದ ರೈತರ ಖಾಸಗಿ ಹಾಗೂ ಸರ್ಕಾರೀ ಸಾಲಗಳನ್ನು ನಮ್ಮ ಸರ್ಕಾರವು ಮನ್ನಾ ಮಾಡಿದೆ. ಪ್ರಾಥಮಿಕ ಹಂತದಿಂದ ಪಿ. ಯು. ಸಿ. ಯವರೆಗಿನ ಶಿಕ್ಷಣವನ್ನು ಉಚಿತವನ್ನಾಗಿ ಮಾಡಲಾಗಿದೆ. ಸಹಕಾರಿ ಸಂಘಗಳು ಹಿಂದಿನ ಲೇವಾದೇವಿಗಾರರಿಂದ ಜನತೆಯನ್ನು ಬಿಡುಗಡೆ ಮಾಡಿವೆ. ಇತ್ತೀಚಿನ ಪ್ರವಾಹ ಪೀಡಿತ ಜನತೆಯ ನೆರವಿಗೆ ಸರ್ಕಾರವು 'ಕೂಲಿಗಾಗಿ ಕಾಳು' ಯೋಜನೆಯನ್ನು ಜಾರಿಗೆ ತಂದಿತು. ಪಂಚಾಯತಿಗಳಿಗೇ ನೇರವಾಗಿ ಲಕ್ಷಾಂತರ ರೂಪಾಯಿ ಹಣ ನೀಡಲಾಯಿತು. ಒಂದು ಲಕ್ಷಕ್ಕೂ ಅಧಿಕ ಜನತೆಗೆ 'ಕೂಲಿಗಾಗಿ ಕಾಳು' ಯೋಜನೆಯ ಅಡಿ ಉದ್ಯೋಗ ನೀಡಲಾಯಿತು.

ಇವೆಲ್ಲಕ್ಕಿಂತ ಹೆಚ್ಚಿನದಾಗಿ ನಮ್ಮ ಸರ್ಕಾರವು ಜನತೆಗೆ ಅವರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಪೂರ್ಣವಾಗಿ ಕೊಟ್ಟಿದೆ. ಜನತೆಯ ಹೋರಾಟಗಳಲ್ಲಿ ಪೋಲೀಸರು ಮಧ್ಯ ಪ್ರವೇಶಿಸುವಂತಿಲ್ಲ. ಭಾಷೆಯ ವಿಷಯವನ್ನು ಮುಂದಿಟ್ಟುಕೊಂಡು ಬುಡಕಟ್ಟು ಜನರ ವಿರುದ್ಧ ಬಂಗಾಳಿ ಜನತೆಯನ್ನು ಎತ್ತಿಕಟ್ಟುವ ಜನತಾ ಮತ್ತು ಕಾಂಗ್ರೆಸ್ಸಿಗರಂತಹ ಪ್ರತಿಗಾಮಿಗಳ ಬೇಳೆಕಾಳು ಇಲ್ಲಿ ಬೇಯದಂತೆ ಮಾಡಿದ್ದೇವೆ.

ಎಡಶಕ್ತಿಗಳ ಕರ್ತವ್ಯ:

ಸರ್ವಾಧಿಕಾರವನ್ನು ಪ್ರತಿನಿಧಿಸುವ ಕಾಂಗ್ರೆಸ್(ಐ) ಪಕ್ಷವನ್ನೂ, ಕೋಮುವಾದವನ್ನು ಪ್ರನಿಧಿಸುವ ಜನತಾ ಪಕ್ಷವನ್ನೂ ಸೋಲಿಸಲು ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಾದ ಸಿ.ಪಿ.ಐ., ಪಿ. ಡಬ್ಲ್ಯು. ಪಿ., ಆರ್. ಎಸ್. ಪಿ, ಫಾರ್ವರ್ಡ್ ಬ್ಲಾಕ್ ಮತ್ತು ಹಳೆಯ ಸಮಾಜವಾದಿ ಪಕ್ಷದವರು, ರಿಪಬ್ಲಿಕನ್ ಪಾರ್ಟಿ, ಅಕಾಲಿದಳ, ಅಣ್ಣಾ ಡಿ.ಎಂ.ಕೆ. ಮತ್ತಿತರರು ಒಗ್ಗಟ್ಟಾಗಿ ಹೋರಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕರೆ ಕೊಡುತ್ತದೆ.

ಈ ಎರಡೂ ಪ್ರತಿಗಾಮಿ ಪಕ್ಷಗಳ ವಿರುದ್ಧ ಸಾಮಾನ್ಯ ಜನರು ಅಣಿಗೂಡುವಂತೆ ಮಾಡುವುದು ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳ ಕರ್ತವ್ಯವಾಗಿದೆ. ಕಾಂಗ್ರೆಸ್ (ಐ) ಮತ್ತು ಜನತಾಪಕ್ಷವನ್ನು ಸೋಲಿಸುವುದು ಮತ್ತು ಲೋಕದಳ ಹಾಗೂ ಕಾಂಗ್ರೆಸ್ ಮೈತ್ರಿಕೂಟವನ್ನು ಅಧಿಕಾರಕ್ಕೆ ತರುವುದು ಪ್ರಜಾಸತ್ತೆಯ ದೃಷ್ಟಿಯಿಂದ ಅಗತ್ಯ.

ಲೋಕದಳ ಮತ್ತು ಕಾಂಗ್ರೆಸ್ ಪಕ್ಷದವರು ಪರಸ್ಪರ ಕಿತ್ತಾಡದೆ ಅತ್ಯಂತ ಸಹಕಾರದಿಂದ ಇದ್ದು ಸರ್ವಾಧಿಕಾರಿ ವಿರುದ್ಧದ ಮತ್ತು ಕೋಮುವಾದದ ವಿರುದ್ಧದ ಇರುವ ಓಟುಗಳನ್ನು ಒಡೆಯದೆ ಇರುವ ಹಾಗೆ ಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅವರಲ್ಲಿ ವಿನಂತಿ ಮಾಡುತ್ತದೆ.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಿಷ್ಟಗೊಳಿಸಿ:

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಟ್ಟಾಗಿ ನಿಂತು ಗಣನೀಯ ಸಾಧನೆ ಮಾಡಿದರೆ ಮಾತ್ರ ಪ್ರಜಾಸತ್ತೆಯ ಉಳಿವಿನ ಪ್ರಶ್ನೆಯ ಮಾತು ಅರ್ಥಪೂರ್ಣವಾಗುತ್ತದೆ.

ತಮ್ಮದೇ ಆದ ಪರ್ಯಾಯವನ್ನು ರಾಷ್ಟ್ರದ ಮುಂದೆ ಇಡಲು ಈಗ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆ ಸಾಧ್ಯವಿಲ್ಲದಿದ್ದರೂ, ಅವರ ಅಭ್ಯರ್ಥಿಗಳು ಈ ಚುನಾವಣೆಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಗೆಲ್ಲುವುದು ತೀರಾ ಅಗತ್ಯವಿದೆ.

ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಬಲವನ್ನು ಸರಿಯಾಗಿ ಅರಿತುಕೊಂಡು ಲೋಕದಳ ಮತ್ತು ಕಾಂಗ್ರೆಸ್ ಮೈತ್ರಿಕೂಟವು ನಮ್ಮೊಂದಿಗೆ ಸರಿಯಾಗಿ ವರ್ತಿಸಬೇಕೆಂದು ನಾವು ಮನವಿ ಮಾಡುತ್ತೇವೆ. ಪ್ರತಿಗಾಮಿಗಳಿಗೆ ಸಹಾಯಕವಾಗುವ ಯಾವುದೇ ಕೆಲಸವನ್ನು ಲೋಕದಳ ಮತ್ತು ಕಾಂಗ್ರೆಸ್ ಮೈತ್ರಿಕೂಟ ಮಾಡಕೂಡದೆಂದೂ ನಮ್ಮ ಮನವಿ.

ಆದ್ದರಿಂದ ಜನತೆಯು ಅತಿಹೆಚ್ಚು ಸಂಖ್ಯೆಯಲ್ಲಿ ಸಿ. ಪಿ. ಐ. (ಎಂ)ನ ಅಭ್ಯರ್ಥಿಗಳನ್ನು ಆರಿಸಿ ಕಳುಹಿಸಬೇಕೆಂದು ನಾವು ಜನತೆಯಲ್ಲಿ ಮನವಿ ಮಾಡುತ್ತೇವೆ. ಸಿ. ಪಿ. ಐ. (ಎಂ)ನ ಗೆಲುವು ಸರ್ವಾಧಿಕಾರದ ಮತ್ತು ಮತೀಯ ಶಕ್ತಿಗಳ ವಿರುದ್ಧದ ಗೆಲವು ಆಗಿರುತ್ತದೆ. ಎಲ್ಲ ರಾಜ್ಯಗಳಲ್ಲೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೇ ಜನರು ಓಟು ಮಾಡಬೇಕೆಂದು ಸಿ. ಪಿ. ಐ. (ಎಂ) ಕರೆ ಕೊಡುತ್ತದೆ.

ಪ್ರತಿಗಾಮಿ ಶಕ್ತಿಗಳ ವಿರುದ್ಧ ಜನತೆಯ ಹಿತಾಸಕ್ತಿಗಳಿಗಾಗಿ ಹೋರಾಟ ಮಾಡುವುದರಲ್ಲಿ ಸಿ. ಪಿ. ಐ. (ಎಂ) ಮತ್ತು ಇತರೆ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ತಾವೇ ಮೇಲೆಂದು ಅವುಗಳ ಹೋರಾಟವೇ ರುಜುವಾತು ಮಾಡಿದೆ. ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಎಡ ಒಕ್ಕೂಟಕ್ಕೆ ಭರ್ಜರಿ ಜಯ ದೊರಕಿಸಿಕೊಡಬೇಕೆಂದು ನಾವು ಅಲ್ಲಿನ ಜನತೆಗೆ ಮನವಿ ಮಾಡುತ್ತೇವೆ.

ಜನತೆಗೆ ನಮ್ಮ ಭರವಸೆಗಳು :

ಕಳೆದ ಎರಡು ವರ್ಷಗಳ ಅವಧಿಯಲ್ಲಿ ತಮ್ಮ ಹಿತಾಸಕ್ತಿಗಳಿಗಾಗಿ ಹೋರಾಡಿದ ಮಹಾನ್ ಜನತೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಅಭಿನಂದಿಸುತ್ತದೆ. ಈ ಹೋರಾಟಗಳಲ್ಲಿ ಗ್ರಾಮೀಣ ಜನರು, ಕಾರ್ಮಿಕರು, ವಿದ್ಯಾರ್ಥಿಗಳು, ಶಿಕ್ಷಕರು, ವೈದ್ಯರು, ಸರ್ಕಾರಿ ನೌಕರರು, ದಾದಿಯರು, ಮುಂತಾದ ಜನ ವಿಭಾಗಗಳು ಅನೇಕ ಕಷ್ಟನಷ್ಟಗಳನ್ನು ಮತ್ತು ಸೆರೆಮನೆ ವಾಸವನ್ನು ಕಂಡಿದ್ದಾರೆ. ಆದರೆ ಧೀರೋದ್ದಾತರಾದ ನಮ್ಮ ಜನತೆಯ ಹೋರಾಟಗಳನ್ನು ಯಾರೂ ಬಗ್ಗುಬಡಿಯಲಾಗಲಿಲ್ಲ. ಜನತೆಯು ಈ ಹೋರಾಟಗಳು ಪ್ರಜಾಪ್ರಭುತ್ವ ಬೆಳೆಯುವಂತೆಯೂ ಸರ್ವಾಧಿಕಾರಿ ಶಕ್ತಿಗಳು ಹಿಮ್ಮೆಟ್ಟುವಂತೆಯೂ ಮಾಡಿವೆ. ಆದರೆ ಹರಿಜನರ ಮೇಲಾದಂತಹ ಅತ್ಯಾಚಾರಗಳನ್ನು ವರ್ಣಿಸಲು ಶಬ್ದಗಳೇ ಇಲ್ಲ. ಅವರನ್ನು ಕೊಲ್ಲಲಾಯಿತು, ಸುಡಲಾಯಿತು ಮತ್ತು ಮಹಿಳೆಯರ ಮಾನಭಂಗ ಮಾಡಲಾಯಿತು. ಮತೀಯ ದಂಗೆಗಳ ಸಮಯದಲ್ಲಿ ಮುಸ್ಲಿಂ ಜನತೆಯ ಮೇಲೂ ಇಂತಹ ಅತ್ಯಾಚಾರಗಳೇ ಜರುಗಿದವು. ಹರಿಜನರು ಮತ್ತು ಮುಸ್ಲಿಮರು ಧೈರ್ಯವಾಗಿ ಈ ಅತ್ಯಾಚಾರಗಳ ವಿರುದ್ಧ ಹೋರಾಡಿದ ಘಟನೆಗಳೂ ಇವೆ. ಈ ಅತ್ಯಾಚಾರಗಳ ವಿರುದ್ಧ ಸಿ. ಪಿ. ಐ. (ಎಂ) ಎಲ್ಲ ಕಾಲದಲ್ಲೂ ಸಂಸತ್ತಿನ ಒಳಗೆ ಮತ್ತು ಹೊರಗಡೆ ಬಲವಾಗಿ ಹೋರಾಡುತ್ತದೆ ಎಂದು ನಾವು ಜನತೆಗೆ ಭರವಸೆ ಕೊಡುತ್ತೇವೆ.

ಪ್ರಗತಿಗಾಗಿ ಕಾರ್ಯಕ್ರಮ :

ಉತ್ಪಾದನಾ ಸಾಧನಗಳನ್ನು ಸಾಮಾಜೀಕರಿಸಿದೆ, ಬಡತನ, ನಿರುದ್ಯೋಗ ಮುಂತಾದ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು ಸಿ. ಪಿ. ಐ. (ಎಂ) ಭಾವಿಸಿಲ್ಲ. ಶೋಷಕರನ್ನು ನಿರ್ಮೂಲನ ಮಾಡದ ಹೊರತು, ಸಮಾಜವಾದವನ್ನು ಸ್ಥಾಪಿಸದ ಹೊರತು ಜನತೆಯ ಯಾವ ಸಮಸ್ಯೆಗಳೂ ಬಗೆಹರಿಯವು.

ಪ್ರಜಾಪ್ರಭುತ್ವವನ್ನು ರಕ್ಷಿಸಲು, ಸರ್ವಾಧಿಕಾರವನ್ನು ಹೊಡೆದೋಡಿಸಲು ನಮ್ಮ ಆರ್ಥಿಕತೆಯ ಮೇಲೆ ಪಟ್ಟಭದ್ರ ಹಿತಾಸಕ್ತಿಗಳಿಗಿರುವ ಬಿಗಿ ಹಿಡಿತವನ್ನು ತಪ್ಪಿಸಬೇಕು.

ಜನತೆಗೆ ಆರ್ಥಿಕ ಹಕ್ಕುಗಳನ್ನು ದಕ್ಕಿಸಿಕೊಡದಿದ್ದರೆ ಜಾತ್ಯಾತೀತತೆಯನ್ನು ಕಾಪಾಡಿಕೊಂಡು ಬರಲು ಸಾಧ್ಯವಿಲ್ಲ.

ಬಹುರಾಷ್ಟ್ರೀಯ ಕಂಪೆನಿಗಳು, ಏಕಸ್ವಾಮ್ಯ ಮನೆತನಗಳು ಶೋಷಣೆ ಮಾಡುತ್ತಿರುವುದನ್ನು ಧಾಳಿಮಾಡಿ ತಪ್ಪಿಸದ ಹೊರತು ರಾಷ್ಟ್ರದ ಮುನ್ನಡೆ ಸಾಧ್ಯವಿಲ್ಲ. ಜಮೀನ್ದಾರರ ವಿರುದ್ಧ ಹೋರಾಡದ ಹೊರತು ನಮ್ಮ ಗ್ರಾಮೀಣ ಜನತೆಗೆ ಬಿಡುಗಡೆ ಇಲ್ಲ.

ಈ ಕೆಳಕಂಡ ಕಾರ್ಯಕ್ರಮವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಜನತೆಯ ಮುಂದಿಡುತ್ತದೆ.

1. ಸಂವಿಧಾನದಲ್ಲಿ ಅಡಕವಾಗಿರುವ, ತುರ್ತುಪರಿಸ್ಥಿತಿ ಹೇರುವಂತಹ ಅವಕಾಶವನ್ನು ಸಂಪೂರ್ಣವಾಗಿ ಕಿತ್ತು ಹಾಕುವುದು. ವಿದೇಶಗಳಿಂದ ರಾಷ್ಟ್ರದ ಮೇಲೆ ಯುದ್ಧ ನಡೆದಾಗ ತುರ್ತುಪರಿಸ್ಥಿತಿ ಹೇರುವಂತಹ ಅವಕಾಶ ಮಾತ್ರ ರಾಷ್ಟ್ರಪತಿಗೆ ಇದ್ದು ಮತ್ತಾವುದೇ ಸಂದರ್ಭದಲ್ಲೂ ತುರ್ತುಪರಿಸ್ಥಿತಿ ಹೇರುವ ಅವರ ಹಕ್ಕನ್ನು ಕಿತ್ತುಹಾಕುವುದು. ಜನತೆ, ನಾವು ಆಯ್ಕೆಮಾಡಿ ಕಳುಹಿಸಿದ ಪ್ರತಿನಿಧಿಗಳನ್ನು ಪುನಃ ಹಿಂದಕ್ಕೆ ಕರೆಸಿಕೊಳ್ಳುವ ಹಕ್ಕು ಅವರಿಗೆ ಇರಬೇಕು. ಪ್ರಾತಿನಿಧಿಕ ಪ್ರಾತಿನಿಧ್ಯವನ್ನು ಕೊಡಬೇಕು ಮತದಾನ ಮಾಡುವ ಹಕ್ಕನ್ನು 18 ವಯಸ್ಸಿಗೆ ಇಳಿಸಬೇಕು.

2. ಹಿರೇ ಬಂಡವಾಳಗಾರರು ಮತ್ತು ಜಮೀನ್ದಾರರು ದೇಶದ ಆರ್ಥಿಕತೆಯ ಮೇಲೆ ಇಟ್ಟುಕೊಂಡಿರುವ ಬಿಗಿ ಹಿಡಿತವನ್ನು ತಪ್ಪಿಸಲು ರಾಜ್ಯಾಂಗದಲ್ಲಿ ತಕ್ಕನಾದ ಬದಲಾವಣೆಯನ್ನು ತರಬೇಕು. ಆಳುವ ಪಕ್ಷದ ಅಥವ ಸರ್ಕಾರದ ಕೈನಿಂದ ಜನತೆಯ ಮೂಲಭೂತ ಹಕ್ಕುಗಳಿಗೆ ಧಕ್ಕೆಯಾಗದಂತೆ ಸಂವಿದಾನಾತ್ಮಕ ಭರವಸೆ, ಪತ್ರಿಕಾ ಸ್ವಾತಂತ್ರ್ಯವನ್ನು ಪೂರ್ಣವಾಗಿ ಕೊಡುವ ಗ್ಯಾರೆಂಟಿ.

3. ದುಡಿಯುವ ಹಕ್ಕನ್ನುಮೂಲಭೂತ ಹಕ್ಕೆಂದು ರಾಜ್ಯಾಂಗದಲ್ಲಿ ಸೇರ್ಪಡಿಸಬೇಕು.

4. ರಾಜ್ಯಗಳಿಗೆ ಹೆಚ್ಚು ಸ್ವಯಂ ಅಧಿಕಾರ ಕೊಡಬೇಕು.

5. ಸಾರ್ವಜನಿಕ ಉದ್ಯಮಗಳ ಅಭಿವೃದ್ಧಿ, ರಾಷ್ಟ್ರಕ್ಕೆ ಒಂದು ಯೋಜನಾಬದ್ಧ ಬೆಳವಣಿಗೆ, ಇದು ವಿದೇಶಿ ನೆರವನ್ನು ಪಡೆಯದ ಸ್ವತಂತ್ರ ಬೆಳವಣಿಗೆಯಾಗಿರಬೇಕು.

6. ವಿಶ್ವಬ್ಯಾಂಕು ನಮ್ಮ ಆರ್ಥಿಕ ಬದುಕಿನ ಮೇಲೆ ಇಟ್ಟುಕೊಂಡಿರುವ ಹಿಡಿತದ ವಿರುದ್ಧ ನಿರಂತರಹೋರಾಟ. ದೇಶವ ಪರಾವಲಂಬನೆಗೆ ಒಳಗಾಗುವಂತಹ ಕ್ರಮವಾದ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಆಹ್ವಾನ ಕೊಡುವುದನ್ನು ಕೂಡಲೇ ನಿಲ್ಲಿಸುವುದು. ವಿದೇಶಿ ಸಂಸ್ಥೆಗಳನ್ನು ರಾಷ್ಟ್ರೀಕರಿಸಬೇಕು. ವಿದೇಶಗಳಿಗೆ ಕೊಡಬೇಕಾದ ಸಾಲದ ಮರುಪಾವತಿಯನ್ನು ಕೂಡಲೇ ನಿಲ್ಲಿಸುವುದು.

7. ಭಾರತದ ಏಕಸ್ವಾಮ್ಯ ಮನೆತನಗಳನ್ನು ರಾಷ್ಟ್ರೀಕರಿಸುವುದು.

8. ನ್ಯಾಯ ಸಮ್ಮತವಾದ ಆದಾಯ ಮತ್ತು ವೇತನ ನೀತಿಯನ್ನು ಅಂಗೀಕರಿಸುವುದು.

9. ಖೋತಾ ಬಜೆಟ್‌ಗಳು ಹಣ ದುಬ್ಬರಕ್ಕೆ ಕಾರಣವಾಗುವುದರಿಂದ ಖೋತಾ ಬಜೆಟ್‌ಗೆ ಪೂರ್ಣ ವಿರಾಮ ಹಾಕುವುದು. ಬೆಲೆಏರಿಕೆಯ ವಿರುದ್ಧ ಕ್ರಮ ತೆಗೆದುಕೊಳ್ಳಲು ಅಗತ್ಯ ಸಾಮಗ್ರಿಗಳನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡುವ ಪದ್ಧತಿಯನ್ನು ಜಾರಿಗೆ ತರುವುದು.

10. ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸುವುದು. ಭೂಸುಧಾರಣೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು. ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಒದಗಿಸಬೇಕು. ರೈತರು ಉಪಯೋಗಿಸುವ ವ್ಯವಸಾಯ ಸಲಕರಣೆಗಳು ಮತ್ತು ಗೊಬ್ಬರವನ್ನು ಕಡಿಮೆ ಬೆಲೆಯಲ್ಲಿ ಅವರಿಗೆ ಒದಗಿಸುವುದು. ರೈತರು ಬೆಳೆದ ಪದಾರ್ಥಗಳಿಗೆ ಲಾಭದಾಯಕ ಬೆಲೆ ಒದಗಿಸುವುದು.

11. ಕೃಷಿಕೂಲಿಗಾರರಿಗೆ ಕನಿಷ್ಠ ವೇತನ ಜಾರಿಮಾಡುವುದು. ಅವರಿಗೆ ವಸತಿ ನಿವೇಶನಗಳನ್ನು ಉಚಿತವಾಗಿ ಒದಗಿಸುವುದು. ಗ್ರಾಮೀಣ ಬಡಜನತೆಯ ಎಲ್ಲ ಸಾಲಗಳನ್ನು ಮನ್ನಾ ಮಾಡುವುದು. ಗ್ರಾಮೀಣ ಬಡಜನರ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ವಿಶೇಷ ಸೌಲಭ್ಯಗಳನ್ನು ಕಲ್ಪಿಸುವುದು.

12. ಗ್ರಾಮೀಣ ನಿರುದ್ಯೋಗಿಗಳಿಗೆ ಪೂರ್ಣ ಉದ್ಯೋಗ ನೀಡಲು

ಬೃಹತ್ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು. ಇನ್ನೂ ಉಳಿದ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ನೀಡುವುದು.

13. ಕಾರ್ಮಿಕ ವರ್ಗಕ್ಕೆ ಅಗತ್ಯಾಧಾರಿತ ಕನಿಷ್ಟ ವೇತನಗಳಿಗಾಗಿ, ಎಲ್ಲರಿಗೂ ಬೋನಸ್ಸಿಗಾಗಿ, ವೇತನ ಸ್ಥಂಬನದ ವಿರುದ್ಧ, ಲಾಕೌಟುಗಳ ವಿರುದ್ಧ, ಲೇ ಆಫ್‌ಗಳ ವಿರುದ್ಧ, ಕಾರ್ಖಾನೆಗಳ ಮುಚ್ಚುವಿಕೆ ವಿರುದ್ಧ, ಮುಚ್ಚಲ್ಪಟ್ಟಿರುವ ಎಲ್ಲ ಮಿಲ್ಲುಗಳನ್ನು ಮತ್ತು ಸಂಸ್ಥೆಗಳನ್ನು ಸರ್ಕಾರವೇ ವಹಿಸಿಕೊಳ್ಳಲು ಟ್ರೇಡ್ ಯೂನಿಯನ್ ಹಕ್ಕುಗಳ ಪೂರ್ಣ ಉಪಯೋಗಕ್ಕಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೌಕರರ ಪೂರ್ಣ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ, ಪೋಲೀಸ್ ತಪಾಸಣೆ ಪದ್ಧತಿಯ ರದ್ದತಿಗಾಗಿ ಎಲ್ಲ ಕಾರ್ಮಿಕ ವಿರೋಧಿ ಶಾಸನಗಳ ವಿರುದ್ಧವಾಗಿ, ಪೂರ್ಣ ಉದ್ಯೋಗಕ್ಕಾಗಿ, ನಿರುದ್ಯೋಗಕ್ಕೆ ಎಡೆ ಮಾಡಿಕೊಡುವ ಯಾಂತ್ರೀಕರಣದ ವಿರುದ್ಧ ಹೋರಾಡಲು ನೀವು ಸಿ. ಪಿ. ಐ. (ಎಂ)ಗೆ ಓಟು ಮಾಡಬೇಕು.

14 ಎಲ್ಲ ರಾಜ್ಯಗಳಲ್ಲೂ ಈ ಕೂಡಲೇ ಉಚಿತ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಜಾರಿಗೊಳಿಸಲು, ಅಗತ್ಯವಿರುವ ಎಲ್ಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಹಾಸ್ಟೆಲ್ ಸೌಲಭ್ಯ ಒದಗಿಸಲು, ವಿದ್ಯಾರ್ಥಿಗಳು ಆಡಳಿತ ವರ್ಗದ ಎಲ್ಲ ಹಂತಗಳಲ್ಲಿ ಭಾಗವಹಿಸುವಂತಾಗಲು ನೀವು ಮುಂಬರುವ ಚುನಾವಣೆಗಳಲ್ಲಿ ಸಿ ಪಿ. ಐ. (ಎಂ)ಗೆ ಮತ ನೀಡಬೇಕು.

15. ಪ್ರಜಾಸತ್ತಾತ್ಮಕವೂ, ಜಾತ್ಯಾತೀತವೂ ಮತ್ತು ವೈಜ್ಞಾನಿಕವೂ ಆದಂತಹ ಶಿಕ್ಷಣ ಪದ್ಧತಿ ತರಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಬೆಂಬಲಿಸಿ.

16. ಹರಿಜನ-ಗಿರಿಜನರ ಮೇಲೆ ಅತ್ಯಾಚಾರವೆಸುಗುವವರ ಮೇಲೆ ತುರ್ತುಕ್ರಮ ತೆಗೆದುಕೊಳ್ಳಲು, ಜಮೀನ್ದಾರರು, ಕಂಟ್ರಾಕ್ಟರುಗಳು, ವ್ಯಾಪಾರಿಗಳು ಮತ್ತು ಉಚ್ಚ ವರ್ಣದವರು ಹರಿಜನ-ಗಿರಿಜನರ ಮೇಲೆ ನಡೆಸುವ ಸಾಮಾಜಿಕ ಮತ್ತು ಆರ್ಥಿಕ ದಬ್ಬಾಳಿಕೆಗಳನ್ನು ಕೊನೆಗಾಣಿಸಲು ಮತ್ತು ಈಗಾಗಲೇ ಉಚ್ಚ ಜಾತಿಗಳವರು ವಶಪಡಿಸಿಕೊಂಡಿರುವ ಹರಿಜನ-ಗಿರಿಜನರ ಜಮೀನನ್ನು ಮತ್ತೆ ಅವರಿಗೇ ಕೊಡಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೇ ಮತ ನೀಡಿ.

17. ಹರಿಜನ-ಗಿರಿಜನರಿಗೆ ಮತ್ತು ಹಿಂದುಳಿದ ಜಾತಿಗಳಿಗೆ ಹಾಗೂ ಆದಿವಾಸಿಗಳಿಗೆ ಸರ್ಕಾರಿ ನೌಕರಿಗಳಲ್ಲಿ ಮೀಸಲಾತಿಗಾಗಿ, ಹಾಗೂ ಬೌದ್ಧರು ಮತ್ತು ಕ್ರಿಶ್ಚಿಯನ್ನರಾಗಿ ಮತಾಂತರ ಹೊಂದಿದ ಹರಿಜನ-ಗಿರಿಜನರಿಗೆ ನೌಕರಿಗಳಲ್ಲಿ ವಿಶೇಷ ಮೀಸಲಾತಿಗಾಗಿ ಸಿ. ಪಿ. ಐ. (ಎಂ) ಹೋರಾಡುತ್ತದೆ.

18. ಮತೀಯ ಅಲ್ಪಸಂಖ್ಯಾತರಾದ ಮುಸಲ್ಮಾನರ ಹಿತಾಸಕ್ತಿಗಳ ರಕ್ಷಣೆಗಾಗಿ ಮತ್ತು ಉರ್ದು ಭಾಷೆಯ ಅಭಿವೃದ್ಧಿಗಾಗಿ ಸಿ. ಪಿ. ಐ. (ಎಂ) ಹೋರಾಡುತ್ತದೆ.

19. ಎಲ್ಲ ಭಾರತೀಯ ಭಾಷೆಗಳಿಗೂ ಸಮಾನ ಸ್ಥಾನಮಾನಕ್ಕಾಗಿ ಮತ್ತು ಹಿಂದಿ ಭಾಷೆಯನ್ನು ಹಿಂದಿಯೇತರರ ಮೇಲೆ ಹೇರುವುದರ ವಿರುದ್ಧ ನಮ್ಮ ಪಕ್ಷ ಹೋರಾಡುತ್ತದೆ. ಗಣನೀಯ ಪ್ರಮಾಣದಲ್ಲಿ ಉರ್ದು ಮಾತನಾಡುವ ಜನರಿರುವ ಪ್ರದೇಶದಲ್ಲಿ ಉರ್ದು ಭಾಷೆಯನ್ನು ಎರಡನೇ ಭಾಷೆಯಾಗಿ ಮಾನ್ಯ ಮಾಡಲು ನಾವು ಹೋರಾಡುವೆವು. ರಾಜ್ಯಾಂಗದ ಎಂಟನೇ ವಿಧಿಯಲ್ಲಿ ನೇಪಾಳಿ ಭಾಷೆಯನ್ನು ಸೇರಿಸಿಕೊಳ್ಳಲೂ ನಾವು ಹೋರಾಡುತ್ತೇವೆ.

20. ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಗಳಿಗಾಗಿ, ಕೈಗಾರಿಕೆ- ವ್ಯವಸಾಯ ಕ್ಷೇತ್ರಗಳಲ್ಲಿ ಅವರಿಗೆ ಪುರುಷರಷ್ಟೇ ಪ್ರಮಾಣದ ವೇತನಗಳಿಗಾಗಿ, ಆಸ್ತಿಯ ಹಕ್ಕನ್ನು ಪುರುಷರಂತೆಯೇ ಮಹಿಳೆಯರೂ ಪಡೆಯಲು, ವಿವಾಹ ಮತ್ತು ವಿವಾಹ ವಿಚ್ಛೇದನ ಕಾನೂನುಗಳ ಜಾರಿಗಾಗಿ, ಕೆಲವೊಂದು ತರಹೆಯ ಉದ್ಯೋಗಗಳಿಗೆ ವಿವಾಹಿತ ಮಹಿಳೆಯರ ನೇಮಕಾತಿ ನಿರ್ಬಂಧವನ್ನು ತೆಗೆದುಹಾಕಲು, ಹೆರಿಗೆ ಸೌಲಭ್ಯ ಮತ್ತು ಉತ್ತಮ ವೈದ್ಯಕೀಯ ಸೌಲಭ್ಯಗಳಿಗಾಗಿ, ವಿಶೇಷತಃ ಟೀ ತೋಟಗಳಲ್ಲಿ ದುಡಿಯುವ ಮಹಿಳೆಯರಿಗೆ, ಎಳೆ ಮಕ್ಕಳನ್ನು ಬಿಟ್ಟು ದುಡಿಯಲು ಹೋಗುತ್ತಿರುವ ತಾಯಂದಿರ ಮನೆಯ ಮಕ್ಕಳಿಗೆ ದಾದಿಯರ ವ್ಯವಸ್ಥೆಗಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹೋರಾಡುತ್ತದೆ.

21. ಅವನತಿ ಹೊಂದುತ್ತಲಿರುವ ಸಂಸ್ಕೃತಿಯ ಹರಡುವಿಕೆಯನ್ನು ತಡೆಯಲು, ಯುವಜನರ ಮೇಲೆ ದುಷ್ಪರಿಣಾಮ ಉಂಟುಮಾಡುತ್ತಿರುವ ಅಶ್ಲೀಲ ಸಾಹಿತ್ಯವನ್ನು ತಡೆಯಲು, ಮತ್ತು ಪ್ರಗತಿಪರ ಹಾಗೂ ಪ್ರಜಾಸತ್ತಾತ್ಮಕ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯನ್ನು ಬೆಳೆಸಲು ನಾವು ಹೋರಾಡುತ್ತೇವೆ.

22. ಗಣನೀಯ ಪ್ರಮಾಣದಲ್ಲಿ ಆದಿವಾಸಿಗಳು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಇದ್ದರೆ ಅದಕ್ಕೆ ಸ್ವಯಂ ಅಧಿಕಾರವುಳ್ಳ ಪ್ರತ್ಯೇಕ ರಾಜ್ಯ ವ್ಯವಸ್ಥೆಯನ್ನೇ ಮಾಡಿಕೊಡಬೇಕು. ಸ್ಥಳೀಯ ಆಡಳಿತೆಯ ಮೂಲಕ ಅವರ ಭಾಷೆ, ಸಂಸ್ಕೃತಿ ಅಭಿವೃದ್ಧಿ ಹೊಂದಲು ಅನುವಾಗಬೇಕು. ಆದಿವಾಸಿಗಳ ಹಿಂದುಳಿದಿರುವಿಕೆಯನ್ನು ಹೋಗಲಾಡಿಸಲು ಅಗತ್ಯವಿದ್ದಷ್ಟು ಹಣದ ಸಹಾಯವನ್ನು ಮಾಡಬೇಕು.

23. ವಿದೇಶಿ ತಂತ್ರಜ್ಞಾನದ ನೆರವಿನ ಮೇಲೆ ವಿಪರೀತವಾಗಿ ಅವಲಂಬನೆಯನ್ನು ಕೊನೆಗಾಣಿಸಬೇಕು. ದೇಶೀಯ ತಂತ್ರಜ್ಞಾನ ಅಭಿವೃದ್ಧಿಗೆ ಆದ್ಯ ಗಮನ ಕೊಡಬೇಕು. ವಿಜ್ಞಾನಿಗಳಿಗೆ, ಸಂಶೋಧಕರಿಗೆ ಎಲ್ಲ ನೆರವು ನೀಡಬೇಕು.

ವಿದೇಶಾಂಗ ನೀತಿ :

ಸ್ವಾತಂತ್ರ, ಶಾಂತಿ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಗಳಿಕೆಗಾಗಿ ಅಲಿಪ್ತ ವಿದೇಶಾಂಗ ನೀತಿಯು ನಮ್ಮ ಅವಿಭಾಜ್ಯ ಅಂಗವಾಗಿ ಮುಂದುವರಿಯಬೇಕೆಂದು ಸಿ. ಪಿ. ಐ. (ಎಂ) ಪರಿಗಣಿಸುತ್ತದೆ. ಸಾಮ್ರಾಜ್ಯಶಾಹಿಯ ವಿರೋಧಿಯೂ ಮತ್ತು ಎಲ್ಲ ಸಮಾಜವಾದಿ ದೇಶಗಳೊಡನೆ ನಿಕಟಮೈತ್ರಿಯೂ ನಮ್ಮ ದೇಶದ ಹಿತಾಸಕ್ತಿಗಳನ್ನು ಕಾಪಾಡುತ್ತದೆ ಮತ್ತು ಅದು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಪೂರಕ ಎಂದು ನಮ್ಮ ಪಕ್ಷವು ಭಾವಿಸುತ್ತದೆ. ವಿಯೆಟ್ನಾಂ ದೇಶಕ್ಕೆ ಸಿ. ಪಿ. ಐ. (ಎಂ) ತನ್ನ ಸೌಹಾರ್ದ ಬೆಂಬಲವನ್ನು ಕೊಡುತ್ತದೆ. ಕಂಪೂಚಿಯಾದ ಹೆಂಗ್ ಸಮ್ರಿನ್ ಸರ್ಕಾರಕ್ಕೆ ಮಾನ್ಯತೆ ಕೊಡಬೇಕೆಂಬುದು ನಮ್ಮ ನಿಲುವು. ತೃತೀಯ ರಾಷ್ಟ್ರಗಳು ರಾಷ್ಟ್ರೀಯ ವಿಮೋಚನೆಗೆ ಮತ್ತು ಅವುಗಳು ಸಾಮ್ರಾಜ್ಯಶಾಹಿಯ ವಿರುದ್ಧ ನಡೆಸುತ್ತಿರುವ ಎಲ್ಲ ಹೋರಾಟಗಳಿಗೆ ನಮ್ಮ ಬೆಂಬಲವಿದೆ.

ಇಸ್ರೇಲ್‌ನ ಧಾಳಿಯ ವಿರುದ್ಧ ನಮ್ಮ ಬೆಂಬಲವು ಯಾವಾಗಲೂ ಅರಬ್‌ರಾಷ್ಟ್ರಗಳಿಗೆ ಇದೆ. ಪ್ಯಾಲಿಸ್ಥೀನಿಯರು ತಮ್ಮದೇ ಆದ ರಾಷ್ಟ್ರ ಹೊಂದುವ ಅವರ ಹೋರಾಟಕ್ಕೂ ನಮ್ಮ ಬೆಂಬಲವಿದೆ. ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುತ್ತಿರುವ ಆಫ್ರಿಕಾ ರಾಷ್ಟ್ರಗಳ ಎಲ್ಲ ಜನ ಹೋರಾಟಗಳಿಗೂ ನಾವು ಬೆಂಬಲ ಕೊಡುತ್ತೇವೆ. ಜಿಮ್‌ಬಾಬ್ವೆ, ನಮೀಬಿಯ ಮತ್ತು ದಕ್ಷಿಣ ಆಫ್ರಿಕಾಗಳ ಧೀರೋದ್ದಾತ ಹೋರಾಟಗಳಿಗೆ ನಾವು ಬೆಂಬಲಕೊಡುತ್ತೇವೆ.

ಭಾರತ ಮತ್ತು ಸೋವಿಯತ್‌ಗಳ ನಡುವಣ ಮೈತ್ರಿಯನ್ನು ಮತ್ತಷ್ಟು ಶಕ್ತಿಯುತವಾಗಿ ಮಾಡಬೇಕು ಹಾಗೂ ಚೀನಾದೊಡನೆ ಭಾರತವು ತನ್ನ ಸಂಬಂಧ ಸುಧಾರಿಸಿಕೊಳ್ಳಬೇಕೆಂಬುದು ಸಿ. ಪಿ. ಐ. (ಎಂ)ನ ನಿಲುವಾಗಿದೆ. ಭಾರತದ ನೆರೆ ರಾಷ್ಟ್ರಗಳಾದ ಪಾಕಿಸ್ತಾನ, ಬಂಗ್ಲಾದೇಶ, ಶ್ರೀಲಂಕ, ನೇಪಾಳ ಮತ್ತಿತರ ರಾಷ್ಟ್ರಗಳೊಂದಿಗೆ ನಮ್ಮದು ಸ್ನೇಹಪೂರ್ಣ ಸಂಬಂಧಗಳಿರಬೇಕೆಂಬುದು ಸಿ.ಪಿ.ಐ. (ಎಂ) ನಿಲುವಾಗಿದೆ. ಮತ್ತು ಈ ರಾಷ್ಟ್ರಗಳಲ್ಲಿನ ಜನರು ಪ್ರಜಾಸತ್ತೆಗಾಗಿ ನಡೆಸುತ್ತಿರುವ ಹೋರಾಟಗಳಿಗೆ ನಾವು ಪೂರ್ಣ ಬೆಂಬಲ ನೀಡುತ್ತೇವೆ.

ಭಾರತ-ಸೋವಿಯತ್ ಮೈತ್ರಿ ಒಪ್ಪಂದವನ್ನು ಎತ್ತಿ ಹಿಡಿಯುವುದಾಗಿಯೂ ಮತ್ತು ಚೀನಾದೊಡನೆ ಸಂಬಂಧ ಸುಧಾರಿಸಿಕೊಳ್ಳುವುದಾಗಿಯೂ ಜನತಾ ಸರ್ಕಾರ ಹೇಳಿತ್ತು. ಆದರೆ ಅದೇ ಸಮಯಕ್ಕೆ 'ನೈಜವಾದ ಅಲಿಪ್ತ ವಿದೇಶಾಂಗ ನೀತಿ ಎನ್ನುವ ಹೆಸರಿನಲ್ಲಿ ತನ್ನ ಉದ್ದೇಶಗಳ ಬಗ್ಗೆ ಜನತಾ ಸರ್ಕಾರ ಮಾತನಾಡಿ ಅನುಮಾನಕ್ಕೆ ಎಡೆ ಮಾಡಿಕೊಟ್ಟಿತು.

ಅಣುಶಕ್ತಿಯನ್ನು ಶಾಂತಿಯುತ ಉದ್ದೇಶಗಳಿಗೆ ಮಾತ್ರ ಬಳಸುತ್ತೇವೆ ಎಂದು ಜನತಾ ಪ್ರಧಾನ ಮಂತ್ರಿ ಮುರಾರ್ಜಿ ದೇಸಾಯಿಯವರು ಏಕಪಕ್ಷೀಯವಾಗಿ ಘೋಷಿಸಿ ರಾಷ್ಟ್ರದ ಗೌರವಕ್ಕೆ ಧಕ್ಕೆ ತಂದರು. ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರುದ್ಧವಾದ ಮತ್ತು ಇಸ್ರೇಲ್-ಈಜಿಪ್ಟ್ ಒಪ್ಪಂದದಲ್ಲಿ ಸಾಮ್ರಾಜ್ಯಶಾಹಿಗಳಿಗೆ ಪರವಾದ ನಿಲುವನ್ನು ಜನತಾ ಸರ್ಕಾರ ತೋರಿಸಿತು. ಹೆಚ್ಚು ಆರ್ಥಿಕ ಸೌಲಭ್ಯಗಳನ್ನು ಕೊಡುತ್ತೇವೆ ಎನ್ನುವ ಆಧಾರದಲ್ಲಿ ಮತ್ತು ಜನತಾದವರದು 'ನೈಜ ಅಲಿಪ್ತ ವಿದೇಶಾಂಗ ನೀತಿ' ಎಂದು ಹೊಗಳುತ್ತಾ ಅಮೆರಿಕನ್ ಸಾಮ್ರಾಜ್ಯಶಾಹಿಯು ತನ್ನ ಹಿತ ಸಾಧಿಸಿಕೊಂಡಿತು.

ಜನತೆಯಮುಂದೆ ಮೇಲೆಹೇಳಲಾದ ಈ ನಮ್ಮ ಕಾರ್ಯಕ್ರಮಕ್ಕೆ ಪೂರ್ಣ ಬೆಂಬಲ ಕೊಡಬೇಕೆಂದು ಸಿ. ಪಿ. ಐ. (ಎಂ) ಕರೆ ಕೊಡುತ್ತದೆ. ಈ ಕಾರ್ಯಕ್ರಮವನ್ನು ಕೇಂದ್ರ ಬಿಂದುವನ್ನಾಗಿಟ್ಟುಕೊಂಡು ಎಲ್ಲ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಸಾಧ್ಯವಿದ್ದಷ್ಟೂ ವಿಶಾಲವಾದ ಎಡರಂಗ ಕಟ್ಟಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕರೆ ಕೊಡುತ್ತದೆ. ಸರ್ವಾಧಿಕಾರಿ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಬೃಹತ್ ಚುನಾವಣಾ ಹೋರಾಟವನ್ನು ಈ ಕಾರ್ಯಕ್ರಮವನ್ನು ಆಧಾರವಾಗಿ ಇಟ್ಟುಕೊಂಡು ಮಾಡಬೇಕೆಂದು ನಮ್ಮ ಪಕ್ಷ ವಿನಂತಿಸುತ್ತದೆ.

ಈ ಮೇಲೆ ಹೇಳಲಾದ ಕಾರ್ಯಕ್ರಮ ಜಾರಿ ಮಾಡದೆ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಜನತೆಯು ಮುಂದುವರಿಯಲು ಸಾಧ್ಯವಿಲ್ಲ. ಜನತೆಯಿಂದ ಆರಿಸಲ್ಪಡುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಸತ್ ಸದಸ್ಯರು ಈ ಮೇಲಣ ನಮ್ಮ ಕಾರ್ಯಕ್ರಮದ ಜಾರಿಗಾಗಿ ಹೋರಾಡುವರೆಂದು ನಾವು ಜನತೆಗೆ ಭರವಸೆ ಕೊಡುತ್ತೇವೆ. ಜನತೆಗೆ ನಾವು ಸದಾ ನಿಷ್ಠರಾಗಿದ್ದುಕೊಂಡು ಅವರಿಗಾಗಿ ನಾವು ಎಲ್ಲ ಆಸಕ್ತ ಹಿತಗಳ ವಿರುದ್ಧ ಸದಾ ಹೋರಾಡುತ್ತೇವೆ ಎಂದು ಭರವಸೆ ಕೊಡುತ್ತೇವೆ.

(ಮುಗಿಯಿತು)

●

ಖಾಯಂ ಕೆಲಸಕ್ಕಾಗಿ ಕೊಕ್ಕೊ ಕಾರ್ಮಿಕರ ಹೋರಾಟ – ಜಯ

ದ. ಕ. ಜಿಲ್ಲೆಯ ಪುತ್ತೂರು ತಾಲ್ಲೂಕಿನ ಬಿಳಿನೆಲೆ ಗ್ರಾಮದಲ್ಲಿರುವ ಸರಕಾರಿ ಕೊಕ್ಕೊ ತೋಟಗಳಲ್ಲಿ ದುಡಿಯುತ್ತಿರುವ ಸುಮಾರು 75 ಮಂದಿ ಕೊಕ್ಕೊ ಕೆಲಸಗಾರರಿಗೆ ಕಳೆದ ಎರಡು ತಿಂಗಳಲ್ಲಿ ಕೆಲಸ ನಿಲ್ಲಿಸಲಾಗಿತ್ತು. ಹಲವಾರು ಮನವಿ ಹಾಗೂ ಒತ್ತಾಯಗಳನ್ನು ಕಾರ್ಮಿಕರು ಹಾಗೂ ಯೂನಿಯನ್ ನಡೆಸಿದರೂ ಅವರಿಗೆ ಕೆಲಸ ಸಿಗದಾಗ, ಕಳೆದ ತಾ. 26-9-1979 ರಂದು ಕಾರ್ಮಿಕರು ಬಿಳಿನೆಲೆಯ ಕೊಕ್ಕೊ ತೋಟದ ಗೇಟಿನ ಬಳಿ ಧರಣಿ ಸತ್ಯಾಗ್ರಹ ಆರಂಭಿಸಿದರು. ಒಂದು ವಾರದ ವರೆಗೆ ಸತ್ಯಾಗ್ರಹ ಮುಂದುವರಿದರೂ, ಕೊಕ್ಕೊ ಅಧಿಕಾರಿಗಳು ಯಾವುದೇ ರೀತಿಯ ಒಪ್ಪಂದಕ್ಕೆ ಬಾರದಾಗ ತಾ. 7-10-79 ರಂದು ಕೊಕ್ಕೊ ಕಾರ್ಮಿಕರಿಗೆ ಬೆಂಬಲವಾಗಿ ರೈಲ್ವೆ ಕೆಲಸಗಾರರು, ಪ್ಲೈವುಡ್ ಕೆಲಸಗಾರರು, ರಬ್ಬರ್ ಪ್ಲಾಂಟೇಶನ್ ಕಾರ್ಮಿಕರು ಮತ್ತು ರೈತಸಂಘದ ಬೆಂಬಲವಿತ್ತು ಕಡಬದಲ್ಲಿ ಸಾರ್ವಜನಿಕ ಸಭೆಯನ್ನು ನಡೆಸಿ ಅಧಿಕಾರಿಗಳನ್ನು ಒತ್ತಾಯಿಸಿದರು. ಈ ಸಭೆಯಲ್ಲಿ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಬಿ. ವಿಷ್ಣುಮೂರ್ತಿ, ಕಾಂ. ಕೆ. ಸೂರ್ಯನಾರಾಯಣ ಭಟ್, ಪ್ಲೈವುಡ್ ಯೂನಿಯನ್ ಕಾರ್ಯಕರ್ತ ಕಾಂ. ವೇಲಾಯುಧನ್, ಕೊಕ್ಕೊ ಕಾರ್ಮಿಕ ಕಾಂ. ಜನಾರ್ಧನ, ರಬ್ಬರ್ ಕಾರ್ಮಿಕ ಮುಂದಾಳು ಕಾಂ. ಆರ್ಮುಗಂ ಮುಂತಾದವರು ಬೆಂಬಲಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಶಿವಪ್ಪಗೌಡರು (ರೈತಸಂಘ ಬಿಳಿನೆಲೆ ಅಧ್ಯಕ್ಷ) ವಹಿಸಿದ್ದರು.

ಕೊಕ್ಕೊ ಅಧಿಕಾರಿಗಳು ಮತ್ತೂ ಯಾವುದೇ ಒಪ್ಪಂದಕ್ಕೆ ಬಾರದಾಗ ತಾ. 9-10-79 ರಿಂದ ಪುತ್ತೂರು ಕೊಕ್ಕೊ ವಿಭಾಗದ, ಜಿಲ್ಲಾ ಅರಣ್ಯಾಧಿಕಾರಿಗಳ ಕಛೇರಿಯೆದುರು ಕೂಡಾ ಕಾರ್ಮಿಕರು ಅನಿರ್ದಿಷ್ಟಾವಧಿಯ ಸತ್ಯಾಗ್ರಹವನ್ನು ಆರಂಭಿಸಿದರು.

ಈ ರೀತಿ ಸತ್ಯಾಗ್ರಹವು 17 ದಿನಕ್ಕೆ ಮುಂದುವರಿದಾಗ ತಾ. 12-10-1979 ರಂದು ಜಿಲ್ಲಾ ಕಾರ್ಮಿಕ ಅಧಿಕಾರಿಯವರ ಕಛೇರಿಯಲ್ಲಿ ನಡೆದ ಕನ್ಸಿಲಿಯೇಶನ್‌ನಲ್ಲಿ ಎಲ್ಲಾ 75 ಜನ ಕಾರ್ಮಿಕರಿಗೂ ಖಾಯಂ ಕೆಲಸ ಕೊಡುವುದಾಗಿ ಜಿಲ್ಲಾ ಅರಣ್ಯಾಧಿಕಾರಿಗಳು ಒಪ್ಪಿರುತ್ತಾರೆ.

ಈ ಮಾತುಕತೆಯಲ್ಲಿ ಜಿಲ್ಲಾ ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ. ಕೆ. ಮೂಸಬ್ಬ, ಕಾಂ. ಕೆ. ಸೂರ್ಯನಾರಾಯಣ ಭಟ್, ಕಾಂ. ಎನ್. ಎ. ಸಬೆಸ್ಟಿಯನ್, ಕಾಂ. ಜನಾರ್ಧನ್ ಮುಂತಾದವರು ಭಾಗವಹಿಸಿದ್ದರು.

ಈ ರೀತಿಯ ಒಪ್ಪಂದದ ಹಿನ್ನೆಲೆಯಲ್ಲಿ ಸತ್ಯಾಗ್ರಹವನ್ನು ಕೊಕ್ಕೊ ಕಾರ್ಮಿಕರು ನಿಲ್ಲಿಸಿರುತ್ತಾರೆ. ನಂತರ ತಾ. 18-10-79 ರಂದು ಬಿಳಿನೆಲೆಯಲ್ಲಿ ಕೊಕ್ಕೊ ಕಾರ್ಮಿಕರು ಮೆರವಣಿಗೆ ಸಭೆಗಳನ್ನು ನಡೆಸಿದರು. ಈ ಹೋರಾಟದಲ್ಲಿ ಬೆಂಬಲವಿತ್ತ ಕಾರ್ಮಿಕ ಬಂಧುಗಳಿಗೂ, ಸಂಘ ಸಂಸ್ಥೆಗಳಿಗೂ, ಯೂನಿಯನ್ ಕಾರ್ಯದರ್ಶಿ ಕಾಂ. ಶಶಿಧರನ್ ಹಾಗೂ ಹೋರಾಟ ಸಮಿತಿಯ ಸಂಚಾಲಕ ಕಾಂ. ಎನ್. ಎ. ಸಬೆಸ್ಟಿಯನ್ ಅಭಿನಂದಿಸಿದ್ದಾರೆ.

●

ಹೊಳಲೂರು ದಲಿತ ರೈತರ ಧರಣೀ ಸತ್ಯಾಗ್ರಹ

ಶಿವಮೊಗ್ಗ ನಗರದಿಂದ ಹತ್ತು ಮೈಲಿ ದೂರದಲ್ಲಿರುವ ಹೊಳಲೂರು ಗ್ರಾಮದ ಭೂಹೀನ ದಲಿತ ರೈತರು ಜುಂಜಪ್ಪನ ಕೆರೆ ಜಮೀನನ್ನು ಭೂಹೀನ ದಲಿತರಿಗೆ ನೀಡಬೇಕೆಂತಲೂ, ದಲಿತರಿಂದ ಕೊಂಡುಕೊಂಡಿರುವ ಹೊಸಕೆರೆ ಭೂಮಿಯನ್ನು ಹಿಂತಿರುಗಿ ಕೊಡಬೇಕೆಂಬ ಮುಖ್ಯ ಬೇಡಿಕೆಗಳನ್ನು ಇಟ್ಟುಕೊಂಡು ದಿನಾಂಕ 8-10-79 ರಿಂದ 12-10-79ರವರೆಗೆ ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಸರದಿ ಧರಣಿ ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದರು.

ಈ ಹಿಂದೆ ದಿನಾಂಕ 3-9-79 ರಂದು ಹೊಳಲೂರಿನಿಂದ ಸುಮಾರು 52 ಮಂದಿ ಭೂಹೀನರು ಕಾಲ್ನಡಿಗೆಯಲ್ಲೇ ಶಿವಮೊಗ್ಗಾಕ್ಕೆ ಜಾತಾ ಮೂಲಕ ಬಂದು ಜಿಲ್ಲಾಧಿಕಾರಿಗಳಿಗೆ ಮೇಲ್ಕಂಡ ಬೇಡಿಕೆಗಳ ಬಗ್ಗೆ ಮನವಿಯನ್ನು ಅರ್ಪಿಸಿದ್ದರು. ಇಲ್ಲಿಯವರೆಗೂ ಸರ್ಕಾರ ಈ ವಿಷಯದ ಬಗ್ಗೆ ಕಿಂಚಿತ್ತೂ ಗಮನ ನೀಡದ ಪ್ರಯುಕ್ತ ಸರಕಾರದ ರೈತ ವಿರೋಧಿ ನೀತಿಯನ್ನು ಪ್ರತಿಭಟಿಸಿ ಈ ಧರಣಿ ಸತ್ಯಾಗ್ರಹವನ್ನು ನಡೆಸಿದರು.

ಶಿವಮೊಗ್ಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್‌ಪಕ್ಷದ ಮುಂಚೂಣಿಯಲ್ಲಿ ನಡೆದ ಧರಣೀ ಸತ್ಯಾಗ್ರಹವನ್ನು ಕಾಂ. ಶಿವಶಂಕರ್, ಕಾಂ.ಗೋಪಾಲ ನಾಯಕ್, ಕಾಂ. ಮೇಘರಾಜ್, ಕಾಂ. ಚಂದ್ರಪ್ಪ ಇವರು ಸರದಿ ಧರಣೀ ಸತ್ಯಾಗ್ರಹದ ದಿನಗಳಲ್ಲಿ ನೇತೃತ್ವ ವಹಿಸಿದ್ದರು.

ಕೊನೆಯ ದಿನ ಎಲ್ಲಾ ಭೂಹೀನ ರೈತರುಗಳನ್ನುದ್ದೇಶಿಸಿ, ಜಿಲ್ಲಾ ಸಿ.ಪಿ.ಎಂ. ಕಾರ್ಯದರ್ಶಿ ಕಾಂ. ಚಂದುಕಟ್ಟಿ ಹಾಗೂ ಕಾಂ. ಶಿವಶಂಕರ್ ಅವರುಗಳು ಹೋರಾಟದ ಬಗ್ಗೆ ಮಾತನಾಡಿ ಭೂಹೀನರಿಗೆ ಶೀಘ್ರದಲ್ಲಿಯೇ ಭೂಮಿಯನ್ನು ಕಾನೂನು ರೀತ್ಯಾ ವಿತರಣೆ ಮಾಡಬೇಕೆಂದು ಹೇಳಿ, ಈ ಹೋರಾಟಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಂಪೂರ್ಣ ಬೆಂಬಲ ಕೊಡುತ್ತದೆ ಎಂದು ಭರವಸೆ ನೀಡಿದರು. ○

ಜೆ.ಪಿ. ನಿಧನಕ್ಕೆ ಶೋಕ

ಭಾರತದ ದುಡಿಯುವ ವರ್ಗದ ಹಕ್ಕು ಬಾಧ್ಯತೆಗಳಿಗಾಗಿ ತುರ್ತುಪರಿಸ್ಥಿತಿಯ ಸಮಯದಲ್ಲಿ ನಾಗರೀಕ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯಗಳಿಗಾಗಿ ಹೋರಾಟ ನಡೆಸಿ ರಾಷ್ಟ್ರದ ಜನತೆಗೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದೊರಕಿಸಿಕೊಟ್ಟ ಶ್ರೀ ಜಯಪ್ರಕಾಶ ನಾರಾಯಣ್‌ರವರ ನಿಧನದ ಬಗ್ಗೆ ಭಾರತೀಯ ವಿದ್ಯಾರ್ಥಿ ಫೆಡರೇಷನ್ನಿನ ತುಮಕೂರು ಶಾಖೆಯು ಅತೀವ ಶೋಕ ವ್ಯಕ್ತಪಡಿಸಿದೆ ಮತ್ತು ಅವರ ಕುಟುಂಬ ವರ್ಗದವರಿಗೆ ಸಹಾನುಭೂತಿ ವ್ಯಕ್ತಪಡಿಸಿದೆ. ●

ಬೀದರ :

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಲು ಕರೆ

ದೇಶದಲ್ಲಿ ತಲೆ ಎತ್ತಿ ನಿಂತಿರುವ ಕೋಮು ಮತ್ತು ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸಲು ಎಡ, ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಬೇಕೆಂದು ತಮ್ಮ ಪಕ್ಷವು ಪ್ರಯತ್ನಿಸುತ್ತಲಿದೆ ಎಂದೂ, ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಮತ್ತು ಆರ್. ಎಸ್. ಎಸ್. ನಿಯಂತ್ರಿತ ಜನತಾಪಕ್ಷವನ್ನು ಸೋಲಿಸಲು ಮುಂಬರುವ ಚುನಾವಣೆಯಲ್ಲಿ ಲೋಕದಳ-ಕಾಂಗ್ರೆಸ್ ಕೂಟಕ್ಕೆ ಇತರೆ ಎಡ ಪಕ್ಷಗಳೂ ಸೇರಿ ಬೆಂಬಲವೀಯಲು ನಮ್ಮ ಪಕ್ಷವು ತೀರ್ಮಾನಿಸಿದೆಯೆಂದು 13-10-79 ರಂದು ಸಂಜೆ ಬೀದರದ ಲೈಬ್ರರಿ ಮೈದಾನದಲ್ಲಿ ಸೇರಿದ್ದ ಪ್ರಚಂಡ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರುಗಳಾದ ಕಾಂ. ಎಂ. ಕೆ. ಭಟ್, ಕಾಂ. ಗಂಗಾಧರ ನವೋಶಿ ಮತ್ತು ಕಾಂ. ಎನ್. ಕೆ. ಉಪಾಧ್ಯಾಯ ಹೇಳಿದರು. ಚರಣಸಿಂಗರ ಸರಕಾರವಾಗಲೀ, ದೇವರಾಜ ಅರಸರ ಸರಕಾರವಾಗಲೀ, ಮೊರಾರ್ಜಿ ಸರಕಾರದಂತೆ ಜನ ವಿರೋಧಿ-ಕಾರ್ಮಿಕ ವಿರೋಧಿ ನೀತಿಯನ್ನನುಸರಿಸಿದ್ದಾದರೆ ಅವನ್ನು ವಿರೋಧಿಸಲು ನಾವು ಹಿಂಜರಿಯುವುದಿಲ್ಲ ಎಂದು ಸಾರಿದರು. ಬೀದರ ಜಿಲ್ಲೆಯಲ್ಲಿ ಹೊಸತಾಗಿ ಸ್ಥಾಪಿತವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಮಿತಿಯ ಕಾರ್ಯದರ್ಶಿ ಕಾಂ. ಸುಂದರರಾಜ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾಂ. ಸಂಗ್ರಾಮ, ಅಡ್ವೋಕೇಟ್ ಅವರು ಬೀದರ ಪ್ರದೇಶದಲ್ಲಿ ನಡೆಸಲ್ಪಟ್ಟ ರೈತ ಕಾರ್ಮಿಕರ ಹೋರಾಟದ ಕುರಿತು ಪರಿಚಯಮಾಡಿ ಪ್ರಾಸ್ತಾವಿಕ ಭಾಷಣ ಮಾಡಿದರು.

ಸಭೆಯ ಪ್ರಾರಂಭದಲ್ಲಿ ಜೆ. ಪಿ. ಯವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯ್ತು. ಪಿ. ಡಬ್ಲ್ಯು. ಡಿ. ಮತ್ತಿನ್ನಿತರ ಕೆಲಸಗಾರರನ್ನು ಖಾಯಂಗೊಳಿಸಬೇಕೆಂದೂ, ಬಡ ರೈತರಿಗೆ ಒಕ್ಕಲುತನಕ್ಕೆ ಸಹಾಯಮಾಡಬೇಕೆಂದೂ ಕೇಳಿಕೊಳ್ಳುವ ಹಾಗೂ ತಾ. 11 ರಂದು ರಾಜ್ಯಪಾಲರು ಭಾಲ್ಕಿಗೆ ಬಂದಾಗ ಜೆ. ಪಿ. ನಿಧನದ ಸಲುವಾಗಿ 7 ದಿವಸ ಶೋಕ ಆಚರಿಸಬೇಕೆಂದು ಕೇಂದ್ರ-ರಾಜ್ಯ ಸರಕಾರಗಳು ನಿರ್ಣಯಿಸಿರುವಾಗ ರಾಜ್ಯಪಾಲರು ಅದ್ದೂರಿಯಿಂದ ಸಂಚಾರ ಮಾಡುವುದನ್ನು ಸಿ. ಪಿ. ಐ. (ಎಂ) ಮತ್ತು ಜನತಾ ಪಾರ್ಟಿಯವರು ಪ್ರತಿಭಟಿಸಿದಾಗ ಪೋಲೀಸರು ದೆಬ್ಬಾಳಿಕೆ ನಡೆಸಿದ್ದನ್ನು ಖಂಡಿಸುವ ನಿರ್ಣಯಗಳನ್ನು ಮಾಡಲಾಯಿತು. ○

ಕುಂದಾಪುರದಲ್ಲಿ ಬೀಡಿಕಾರ್ಮಿಕರ ಪ್ರತಿಭಟನಾ ಸಭೆ

ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ಸೇರಿದ್ದ ಬೀಡಿಕಾರ್ಮಿಕರ ಬೃಹತ್ ಮೆರವಣಿಗೆಯು ತಾ. 17-10-79 ರಂದು ಕುಂದಾಪುರದ ಕೆಲಸಗಾರರ ಸಂಘದ ಆಫೀಸಿನಿಂದ ಹೊರಟು, ಭಾರತ್ ಬೀಡಿಯ ಪ್ರಮುಖ ಕಂಟ್ರಾಕ್ಟರ್‌ರವರಿಗೂ, ತಾಲ್ಲೂಕು ಕಚೇರಿ ಆವರಣದೊಳಗೆ ಸಹಾ ಹೋಗಿ ತಹಶೀಲ್ದಾರ್‌ರವರಿಗೂ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

[ಕಡೆಯ ಪುಟ ನೋಡಿ]

ಕುಣಿಗಲ್‌ನಲ್ಲಿ ಬೀಡಿ ಕಾರ್ಮಿಕರ ಬೇಡಿಕೆ ದಿನಾಚರಣೆ

ಅಖಿಲ ಭಾರತ ಬೀಡಿ ಕಾರ್ಮಿಕರ ಬೇಡಿಕೆ ದಿನಾಚರಣೆ ಅಂಗವಾಗಿ ತುಮಕೂರು ಜಿಲ್ಲಾ ಕುಣಿಗಲ್‌ನಲ್ಲಿ ತಾ. 17-10-79ರಂದು ಬೀಡಿ ಕಾರ್ಮಿಕರ ಬೃಹತ್ ಮೆರವಣಿಗೆಯನ್ನು ನಡೆಸಲಾಯಿತು. ಮಹಿಳಾ ಕಾರ್ಮಿಕರೇ ಅಧಿಕ ಸಂಖ್ಯೆಯಲ್ಲಿದ್ದ ಮೆರವಣಿಗೆ ತಹಸೀಲ್ದಾರರ ಕಛೇರಿಗೆ ಹೋಗಿ ಕಾಂ. ಬಡೇಸಾಬ್ ಹಾಗೂ ಕಾಂ. ಯೂನುಸ್‌ಖಾನ್‌ರವರ ನೇತೃತ್ವದಲ್ಲಿ ಮನವಿ ಅರ್ಪಿಸಿದರು. ನೆರೆದಿದ್ದ ರೈತ, ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ ಕಾಂ. ಅಂಜಪ್ಪನವರು ರೈತ ಕಾರ್ಮಿಕರ ಬಲವಾದ ಸಂಘಟನೆಗಳು ಬೆಳೆದು ಹೋರಾಟದ ಹಾದಿಯನ್ನು ಹಿಡಿದಾಗ ಮಾತ್ರ ಅವರು ತಮ್ಮ ಹಕ್ಕುಗಳನ್ನು ಪಡೆಯಲುಸಾಧ್ಯ. ಇದೇಅಕ್ಟೋಬರ್ 23,24ರಂದು ನಡೆಯಲಿರುವ ಜಿಲ್ಲಾ ರೈತ ಸಮ್ಮೇಳನಕ್ಕೆ ಎಲ್ಲಾ ದುಡಿಯುವ ವರ್ಗದ ಜನತೆ ಬೆಂಬಲ ನೀಡಿ ಯಶಸ್ವಿಗೊಳಿಸಬೇಕೆಂದು ಕೇಳಿಕೊಂಡರು.

ನಂತರ ಸಿ.ಐ ಟಿ.ಯು. ಕಛೇರಿಗೆ ಬಂದ ಮೆರವಣಿಗೆಯು, ಬೀಡಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಕಾಂ. ಬಡೇಸಾಬರ ಭಾಷಣದ ನಂತರ ಮುಕ್ತಾಯವಾಯಿತು.

ಧಾರವಾಡ :

ಪಕ್ಷದ ಹಿತೈಷಿಗಳ ಸಭೆ

ಇಂದಿನ ರಾಜಕೀಯ ಪರಿಸ್ಥಿತಿ ಮತ್ತು ಪಕ್ಷದ ನಿಲುಮೆಯನ್ನು ಕುರಿತು ಅಕ್ಟೋಬರ್ 15 ರಂದು ರಾತ್ರಿ ಧಾರವಾಡದ ರೋಟರಿ ಹಾಲಿನಲ್ಲಿ ಸೇರಿದ್ದ ಪಕ್ಷದ ಸದಸ್ಯರು ಮತ್ತು ಹಿತೈಷಿಗಳ ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಕಾಂ. ಎಂ.ಕೆ. ಭಟ್ ಮಾತನಾಡಿದರು. ಸಂಘಟನೆಯನ್ನು ಬಲಪಡಿಸಲು ಸದಸ್ಯರು ಮತ್ತು ಹಿತೈಷಿಗಳಿಗೆ ಕರೆ ಇತ್ತರು. ○

ಬೀಡಿ ಕೈಗಾರಿಕೆಯಲ್ಲಿ ಕಪ್ಪುಹಣ ಇಲ್ಲ –ಜ್ಯೋತಿ ಹೋಂ ಇಂಡಸ್ಟ್ರೀಸ್ ಹೇಳಿಕೆ

ಮಹನೀಯರೇ,

ನಿಮ್ಮ ಐಕ್ಯರಂಗ ವಾರಪತ್ರಿಕೆ (ಸಂಪುಟ 1, ಸಂಚಿಕೆ 29, ದಿನಾಂಕ 30-9-79) ಯಲ್ಲಿ ಪ್ರಕಟವಾದ 'ಬೀಡಿಕೈಗಾರಿಕೆಯಲ್ಲಿ ಕಪ್ಪುಹಣ' ಎಂಬ ಲೇಖನದ ಬಗ್ಗೆ ನಿಮ್ಮ ಗಮನ ಸೆಳೆಯಬಯಸುತ್ತೇವೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿಯ ಮುಖಪತ್ರಿಕೆ ಎಂದು ಹೇಳಿಕೊಳ್ಳುವ ಜವಾಬ್ದಾರಿಯುತ ಪತ್ರಿಕೆಯಲ್ಲಿ ಸತ್ಯಕ್ಕೆ ದೂರವಾದ, ಕೀಳು ಮಟ್ಟದ ಮತ್ತು ಯಶಸ್ಸಿಗೆ ಕುಂದು ತರುವಂತಹ ಸುದ್ದಿಯನ್ನು ಪ್ರಕಟಿಸಿರುವುದರ ಬಗ್ಗೆ ವಿಷಾದ ಪಡುತ್ತೇವೆ. ಕಂಟ್ರಾಕ್ಟ್‌ದಾರರು ಅವರಿಗೆ ಕೊಟ್ಟ ಕಚ್ಚಾ ವಸ್ತುಗಳಿಗೆ ಸರಿಯಾಗಿ ನಿಗದಿಯಾದ ಸಂಖ್ಯೆಯಲ್ಲಿ ಬೀಡಿಯನ್ನು ಒದಗಿಸುವುದರಲ್ಲಿ ವಿಫಲರಾದರೆ ಮಾತ್ರ ಕಂಟ್ರಾಕ್ಟರುಗಳ ಕೈಯಿಂದ ವಸೂಲಿಮಾಡಲಾಗುತ್ತದೆ.

ಕೆಲವು ಕಂಟ್ರಾಕ್ಟರುಗಳು ಅಕ್ರಮವಾಗಿ ಕಡಿತಮಾಡಿಕೊಂಡು ಕಾರ್ಮಿಕರನ್ನು ಶೋಷಣೆ ಮಾಡುವುದು ಸಾಧ್ಯವಿದೆ. ಆದರೆ, ಈ ರೀತಿಯ ಘಟನೆಗಳನ್ನು ನಿರ್ದಿಷ್ಟವಾಗಿ ಆಧಾರಗಳೊಡನೆ ನಮ್ಮ ಗಮನಕ್ಕೆ ತಂದಲ್ಲಿ ಕಂಟ್ರಾಕ್ಟರರ ಒಪ್ಪಂದವನ್ನು ರದ್ದುಮಾಡುವುದೂ ಸೇರಿದಂತೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಕಂಟ್ರಾಕ್ಟರರುಗಳಿಂದ ವಸೂಲಿಯಾದ ಪ್ರತಿಯೊಂದು ಪೈಸಾವನ್ನು ಲೆಕ್ಕಕ್ಕೆ ಸೇರಿಸುವುದರಿಂದ ಕಪ್ಪುಹಣದ ಉತ್ಪಾದನೆಯಾಗುವ ಪ್ರಶ್ನೆಯೇ ಬರುವುದಿಲ್ಲ.

ಜ್ಯೋತಿ ಹೋಂ ಇಂಡಸ್ಟ್ರೀಸ್ ಪರವಾಗಿ
ಗಣಪತಿ ಪ್ರಭು
ಮೇನೇಜಿಂಗ್ ಪಾರ್ಟ್‌ನರ್

[30-9-79ನೇ ತಾರೀಕಿನ ಐಕ್ಯರಂಗದಲ್ಲಿ ಜ್ಯೋತಿ ಹೋಂ ಇಂಡಸ್ಟ್ರೀಸ್ ಮಾಲಕರು ಕಪ್ಪುಹಣವನ್ನು ಉತ್ಪಾದಿಸುತ್ತಾರೆ ಎಂಬ ಸುದ್ದಿ ಪ್ರಕಟಮಾಡಿದ್ದಕ್ಕೆ ವಿಷಾದಿಸುತ್ತೇವೆ. ಆದರೆ ಮುಖ್ಯವಾಗಿ ಕಂಟ್ರಾಕ್ಟ್‌ದಾರರ ಕೈಯಲ್ಲಿ ಕಾರ್ಮಿಕರು ಬಹಳಷ್ಟು ಶೋಷಣೆಗೆ ಒಳಗಾಗುತ್ತಲಿದ್ದಾರೆ ಎಂಬ ಅಂಶವನ್ನು ಗಮನಿಸಬೇಕಾಗಿದೆ. ಕಂಟ್ರಾಕ್ಟ್ ಪದ್ಧತಿಯನ್ನೇ ರದ್ದುಮಾಡಿ ನೇರವಾಗಿ ಮಾಲಕ-ಕಾರ್ಮಿಕ ಸಂಬಂಧ ಬರುವಂತೆ ಮಾಡಲು ಎಲ್ಲಾ ಬೀಡಿ ಮಾಲಕರುಗಳು ಮುಂದಾಗುವರೇ ಎಂಬುದು ಪ್ರಶ್ನೆಯಾಗಿದೆ.]

—ಸಂ.

ಸೇವಾ ಸಹಕಾರೀ ಸಂಘದಲ್ಲಿ ಭ್ರಷ್ಟಾಚಾರ ವಿರೋಧಿಸಿ ಸತ್ಯಾಗ್ರಹ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಕೊಳ್ತಿಗೆ ರೈತರ ಸೇವಾ ಸಹಕಾರಿ ಸಂಘ, ರೈತರಿಂದ ಸಾಲ ವಸೂಲಿಗಾಗಿ ವಾರೆಂಟು ಹೊರಡಿಸುವುದು, ರೇಶನ್ ವಸ್ತುಗಳಿಗೆ ಅಕ್ರಮವಾಗಿ ಹೆಚ್ಚಿಗೆ ಹಣ ವಸೂಲಿ ಮಾಡುವುದು ಮುಂತಾದುವನ್ನು ಪ್ರತಿಭಟಿಸಿ, ಪುತ್ತೂರು ತಾಲ್ಲೂಕು ರೈತ ಸಂಘದ ಮುಖಂಡರುಗಳು ತಾ. 9-10-79ರಂದು ಸೊಸೈಟಿಯ ಅಧ್ಯಕ್ಷರಿಗೆ ಮನವಿ ಸಲ್ಲಿಸಿದರು.

ಆದರೂ ಅಕ್ರಮ ವ್ಯವಹಾರಗಳು ನಿಲ್ಲದ ಪ್ರಯುಕ್ತ ತಾ. 12-10-79 ರಂದು ನೂರಾರು ಗ್ರಾಮಸ್ಥರು ಬಾವುಟಗಳನ್ನು ಹಿಡಿದು ಸತ್ಯಾಗ್ರಹ ನಡೆಸಿದಾಗ ವ್ಯವಹಾರ ಸ್ಥಗಿತವಾಗಿ ಕೊನೆಗೆ ಕೊಂಡ ವಸ್ತುಗಳಿಗೆ ಬಿಲ್ಲು ಕೊಡುವುದಾಗಿ ಅಧ್ಯಕ್ಷರು ಒಪ್ಪಿಕೊಂಡರು.

ತಾ. 15-10-79ರಂದು ಕೊಳ್ತಿಗೆ ಗ್ರಾಮದ ಪೆರ್ಲಂಪಾಡಿಯಲ್ಲಿ ಸಂಜೆ ರೈತಸಂಘದ ವತಿಯಿಂದ ಕಾಂ. ಸೂರ್ಯನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಬಿಳಿನೆಲೆ ಗ್ರಾಮದ ರೈತಸಂಘದ ಕಾರ್ಯದರ್ಶಿ ಕಾಂ. ಎ.ಶಿವಪ್ಪಗೌಡ ಮತ್ತು ಲಕ್ಷ್ಮಣಗೌಡರು ರೈತರ ವಿವಿಧ ಹೋರಾಟಗಳು ಹಾಗೂ ಸೊಸೈಟಿ ವ್ಯವಹಾರಗಳ ಬಗ್ಗೆ ವಿವರಿಸಿದರು.

ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ವಿಷ್ಣುಮೂರ್ತಿಯವರು ನವೆಂಬರ್ ಕೊನೆಯ ವೇಳೆಗೆ ಜಿಲ್ಲಾಧಿಕಾರಿಗಳ ಕಛೇರಿ ಎದುರು ನಡೆಯುವ ಚಳುವಳಿ,ರೈತಸಂಘದ ರ‍್ಯಾಲಿ ಮುಂತಾದವುಗಳ ಬಗ್ಗೆ ವಿವರಣೆ ನೀಡಿದರು.

ಕೊನೆಯಲ್ಲಿ ಕಾರ್ಯದರ್ಶಿ ಕಾಂ. ಕುಂಞಬ್ಯಾರಿಯವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು. ○

ಮೈಕೋ ಮಾಲಕರ ಪಿತೂರಿಯನ್ನು ಸೋಲಿಸಲು ಕರೆ

[ಒಂದನೇ ಪುಟದಿಂದ]

ಇವನ್ನೆಲ್ಲಾ ಬಹಳ ಗಂಭೀರವಾಗಿ ಚರ್ಚೆಮಾಡಿ, ಕಾರ್ಮಿಕರಿಗೆ ನ್ಯಾಯ ಒದಗಿಸುವುದಕ್ಕಾಗಿ ತಕ್ಷಣವೇ ರಾಜ್ಯ ಮತ್ತು ಕೇಂದ್ರ ಸರಕಾರಗಳು ಮುಂದೆ ಬರುವಂತೆ ಒತ್ತಾಯಿಸಿದೆ. ಮಾಲಕರು ನಡೆಸುವ ಗೂಂಡಾಗಿರಿಯನ್ನು ನಿಲ್ಲಿಸಲು ಸರಕಾರವು ಕೂಡಲೇ ಕ್ರಮವಹಿಸುವಂತೆ ಒತ್ತಾಯಿಸಿದೆ. ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುವ ಮೈಕೋ ಕಂಪೆನಿಯ ಕಾರ್ಮಿಕರ ಹೋರಾಟಕ್ಕೆ ರಾಜ್ಯದಾದ್ಯಂತ ಬೆಂಬಲವೀಯಲು ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಎಲ್ಲಾ ಘಟಕಗಳೂ ಮುಂದಾಗಲು ಸೆಕ್ರಟಾರಿಯಟ್ ಕರೆ ಇತ್ತಿದೆ. ○

ಬಹುಗುಣರ ದೊಂಬರಲಾಗ ?

[ಒಂದನೇ ಪುಟದಿಂದ]

ಕಾರಣಗಳಿಂದ ಸರ್ವಾಧಿಕಾರಿ ವಿರೋಧ ನಡೆಯತಕ್ಕ ಸಂಯುಕ್ತ ಹೋರಾಟವನ್ನು ಮರೆಯುವಂತಾಗಬಾರದು. ಸಿ. ಎಫ್. ಡಿ. (ಬಹುಗುಣರ ಪ್ರಜಾತಂತ್ರಕ್ಕಾಗಿ ಕಾಂಗ್ರೆಸ್)ಯು ಸರ್ವಾಧಿಕಾರ ಮತ್ತು ಕೋಮುಶಕ್ತಿಗಳ ವಿರುದ್ಧದ ಹೋರಾಟದ ಒಂದು ಅಂಗವಾಗಿ ಉಳಿಯುವಂತೆ ಅದರ ಎಲ್ಲಾ ಸದಸ್ಯರು ಮತ್ತು ಬೆಂಬಲಿಗರು ಭರವಸೆ ನೀಡುವರೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋವು ಆಶಿಸುತ್ತದೆ." ○

ಕುಂದಾಪುರದಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನಾ ಸಭೆ

[7ನೇ ಪುಟದಿಂದ]

ಕೋಣಿ, ಕೋಟೇಶ್ವರ, ನೆಲ್ಲಿಕಟ್ಟೆ, ವಡೇರ ಹೋಬಳಿ ಮತ್ತು ಆಸುಪಾಸಿನ ಗ್ರಾಮಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸೇರಿದ ಬೀಡಿಕಾರ್ಮಿಕರ ಈ ಪ್ರತಿಭಟನಾ ಕಾರ್ಯಕ್ರಮವು ಗಮನಾರ್ಹವಾಗಿತ್ತು. ಬಳಿಕ ಕುಂದಾಪುರ ನಗರಸಭೆಯ ಮಾಜಿ ಉಪಾಧ್ಯಕ್ಷ ಕಾಂ. ಅಬ್ರಹಾಂ ಕರ್ಕಡರವರ ಅಧ್ಯಕ್ಷತೆಯಲ್ಲಿ ಸೇರಿದ ಬೃಹತ್ ಸಭೆಯನ್ನುದ್ದೇಶಿಸಿ ಕಾಂ. ಸಿ. ನಾರಾಯಣ ಮತ್ತು ಕಾಂ. ಕೆ. ಶಂಕರ್‌ನವರು ಮಾತನಾಡಿದರು. ಬೇಡಿಕೆಗಳು ಈಡೇರದಿದ್ದಲ್ಲಿ ಶೀವ್ರಚಳುವಳಿ ನಡೆಸಲು ಕರೆ ಇತ್ತರು.

ಪ್ರಾರಂಭದಲ್ಲಿ ಕಾಂ. ಬಿ. ಸುಲೋಚನ ಸ್ವಾಗತಿಸಿದರು. ಕಾಂ. ಗುಲಾಬಿಯವರು ವಂದಿಸಿದರು. ●

ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಸಭೆ

ದಿನಾಂಕ 13-10-79 ರಂದು ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಶಿಡ್ಲಘಟ್ಟ ಶಾಖೆಯ ಸರ್ವ ಸದಸ್ಯರ ಸಭೆಯು ಶ್ರೀ ಎನ್. ಮಣಿಯವರ ಅಧ್ಯಕ್ಷತೆಯಲ್ಲಿ ನಡೆದು ಕೈಗೊಂಡ ತೀರ್ಮಾನಗಳು.

1. ಸ್ವಂತ ಮನೆ ಅಥವಾ ಬೇರೆ ಯಾವ ಆಸ್ತಿಯು ಇಲ್ಲದೆ, ಶ್ರಮಮಾಡಿ ಜೀವನ ನಡೆಸುವ ದುರ್ಬಲರು ಬಾಡಿಗೆ ಮನೆಗಳಲ್ಲಿ ವಾಸವಿದ್ದು, ಮಾಹೆಯಾನ ಸಕ್ರಮವಾಗಿ ಬಾಡಿಗೆಯನ್ನು ಮನೆ ಮಾಲೀಕನಿಗೆ ಪಾವತಿ ಮಾಡುತ್ತಿದ್ದರೂ ಸಹಿತ, ಮನೆ ಮಾಲೀಕರು ಬಾಡಿಗೆದಾರನಿಗೆ ಬಾಡಿಗೆ ಪಡೆದ ಹಣಕ್ಕೆ ರಶೀದಿ ನೀಡುವ ಪದ್ಧತಿ ಇಲ್ಲದಾಗಿದೆ. ಬಾಡಿಗೆದಾರನು ಬಾಡಿಗೆ ರಶೀದಿಗಾಗಿ ಒತ್ತಾಯ ತಂದಲ್ಲಿ ತಕ್ಷಣ ಮನೆ ಖಾಲೀ ಮಾಡಬೇಕೆಂದು ಮಾಲೀಕ ಇಲ್ಲಸಲ್ಲದ ಗಲಾಟೆಗಳನ್ನು ಪ್ರಾರಂಭಿಸುತ್ತಾನೆ. ಮನೆ ಮಾಲೀಕ ಇಚ್ಛೆ ಬಂದಂತೆ ಬಾಡಿಗೆಯನ್ನು ಹೆಚ್ಚಿಸುತ್ತಾನೆ. ಹೆಚ್ಚಿಸಿದ ಬಾಡಿಗೆ ಕೊಡಲು ನಿರಾಕರಿಸಿದಲ್ಲಿ, ತಕ್ಷಣ ಮನೆ ಖಾಲೀ ಮಾಡಬೇಕೆಂದುಹಾಗೂ ಬಹಳ ತಿಂಗಳ ಅಥವಾ ವರ್ಷಗಳ ಬಾಡಿಗೆ ಕೊಟ್ಟಿಲ್ಲವೆಂದು ಆದಕಾರಣ ತಕ್ಷಣ ಮನೆ ಬಿಡಬೇಕೆಂದು ಹಾಗೂ ಪೂರ್ತಿ ಬಾಡಿಗೆ ಬಾಕಿ ಪಾವತಿ ಮಾಡಬೇಕೆಂದು ಒತ್ತಾಯ ಹೇರಿ ಘರ್ಷಣೆಗಳಿಗೆ ಅವಕಾಶ ಮಾಡುತ್ತಿರುವುದರ ಬಗ್ಗೆ ಈ ಸಭೆಯು ಚರ್ಚಿಸಿ ಬಾಡಿಗೆದಾರರ ಮೇಲೆ ಮನೆ ಮಾಲೀಕರು ಮನೆ ಖಾಲೀ ಮಾಡಲು ಹೇರುವ ಒತ್ತಾಯ ಅಥವ ಬಾಡಿಗೆ ಬಾಕಿಎಂಬ ಸುಳ್ಳುಗಳಿಗೆ ಅವಕಾಶವಿರದಂತೆ ಕ್ರಮವಹಿಸಿ ಬಾಡಿಗೆ ಪಾವತಿಯ ರಶೀದಿಯನ್ನು ಬಾಡಿಗೆದಾರರಿಗೆ ಮನೆಯ ಮಾಲೀಕರು ಕೊಡಬೇಕೆಂಬ ಕಡ್ಡಾಯವನ್ನು ಹೇರಿ ಬಾಡಿಗೆ ಮನೆಗಳಲ್ಲಿರುವವರಿಗೆ ರಕ್ಷಣೆಕಲ್ಪಿಸಿಕೊಡಲು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಕೋರಬೇಕಾಗಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2. ಮೈಕೋಕಾರ್ಮಿಕರನ್ಯಾಯವಾದ ಬೇಡಿಕೆಗಳ ಪರಿಹಾರಕ್ಕಾಗಿ ನಡೆಸುತ್ತಿರುವ ಮುಷ್ಕರದ ಬಗ್ಗೆ ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಶಿಡ್ಲಘಟ್ಟ ಶಾಖೆ ತನ್ನ ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸಿ ಮುಷ್ಕರಕ್ಕೆ ಸಂಪೂರ್ಣ ಬೆಂಬಲವನ್ನು ನೀಡಬೇಕೆಂದು ತೀರ್ಮಾನಿಸಿತು. ಅಲ್ಲದೆ ತಕ್ಷಣ ಸರ್ಕಾರ ಮಧ್ಯ ಪ್ರವೇಶಮಾಡಿ ಮೈಕೋ ಕಾರ್ಮಿಕರ ಬೇಡಿಕೆಗಳನ್ನು ಪರಿಹರಿಸಿ ಕೊಡಲು ಮುಂದಾಗಬೇಕೆಂದು ಸರ್ಕಾರವನ್ನು ಒತ್ತಾಯಿಸಬೇಕೆಂದು ಸರ್ವಾನುಮತದಿಂದ ಅಂಗೀಕರಿಸಲಾಯಿತು. ○

ಪರಿಸರ

ಕಾಂಗ್ರೆಸ್ (ಐ) ಪಕ್ಷದಲ್ಲಿ ಆಂತರಿಕ ಪ್ರಜಾಸತ್ತೆ ಎಂಬುದು ಇಲ್ಲವೇ ಇಲ್ಲ. ಎಲ್ಲಾ ನಿರ್ಧಾರಗಳನ್ನೂ ಇಂದಿರಾಗಾಂಧಿ ಮತ್ತು ಸಂಜಯಗಾಂಧಿ ತೆಗೆದುಕೊಳ್ಳುತ್ತಾರೆ. ಇವರ ನಿರ್ಧಾರಗಳನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ.

—ಒರಿಸ್ಸಾ ರಾಜ್ಯದ ಕಾಂಗ್ರೆಸ್ (ಐ) ಶಾಸಕ ಪಕ್ಷದ ನಾಯಕ ಸ್ಥಾನಕ್ಕೆ ಮತ್ತು ಕಾಂಗ್ರೆಸ್ (ಐ)ನ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟು ಹೊರಬಂದ ಕಾಂಗ್ರೆಸ್ (ಐ) ನಾಯಕ **ಬೃಂದಾಬನ' ನಾಯಕ್**

ಸಿ. ಪಿ. ಐ. ಮತ್ತು ಸಿ. ಪಿ. ಎಂ. ಪಕ್ಷಗಳನ್ನು ಬಿಟ್ಟರೆ ಈ ದೇಶದ ಉಳಿದೆಲ್ಲ ರಾಜಕೀಯ ಪಕ್ಷಗಳು ಕೆಲವು ವ್ಯಕ್ತಿಗಳ ಮತ್ತು ಗುಂಪುಗಳ ಪಕ್ಷಗಳಾಗಿವೆ.

—ಕಿಶನ್ ಪಟ್ನಾಯಕ್
(ಮಾಜಿ ಸಂಸತ್ ಸದಸ್ಯ ಹಾಗೂ ಸಮಾಜವಾದಿ ಪಕ್ಷದ ಧುರೀಣ)

ಅಮೆರಿಕಾದ ಜನರ ಆರೋಗ್ಯಕ್ಕೆ ಅಪಾಯಕಾರಿ ಎಂದು ಪರಿಗಣಿಸಲಾದ ಔಷಧಿಗಳನ್ನು ಭಾರತದಂತಹ ಬಡ ದೇಶಗಳಿಗೆ ಅಲ್ಲಿನ ಸರ್ಕಾರವು ರಫ್ತು ಮಾಡುತ್ತಿದೆ.

"ಮದರ್ ಜೋನ್ಸ್"
(ಅಮೆರಿಕಾದ ಒಂದು ಪತ್ರಿಕೆ)

ನಿಂತ ನೆಲದಿಂದಲೇ ಕ್ರಾಂತಿ ಕಹಳೆಯನ್ನು ಮೊಳಗುವ ಹಳತಾದ ಮಾರ್ಗವಿದಲ್ಲ. ಯಾರನ್ನು ಕುರಿತು ಹೇಳಬೇಕಿದೆಯೊ ಅವರ ಸನಿಹಕ್ಕೆ ಹೋಗಿ ಕಿವಿ ತುಂಬಿ, ಚಿಂತನಕ್ಕೆ ಗ್ರಾಸ ಒದಗಿಸಿ ಬರುವ ಧ್ಯೇಯ.

'ಕನ್ನಡ ಪ್ರಭ'ದಲ್ಲಿ ವರದಿ
ಸಮುದಾಯ ಜಾತಾವನ್ನು ಕುರಿತು

ಹಿಂದೂ ರಾಷ್ಟ್ರ ಮತ್ತು ಭಾರತ ರಾಷ್ಟ್ರಗಳ ನಡುವಣ ವ್ಯತ್ಯಾಸವನ್ನು ಕುರಿತು ಬಾಳಾಸಾಹೇಬ್ ದೇವರಸ್ ಅವರನ್ನೂ ಕೇಳಿದಾಗ, ನಮ್ಮ ಚಿಂತನೆಯಲ್ಲಿ ಅವೆರಡರ ನಡುವೆ ವ್ಯತ್ಯಾಸವಿಲ್ಲ. ಅವೆರಡೂ ಸಮಾನಾರ್ಥದ ಪದಗಳು ಎಂದು ಉತ್ತರಿಸಿದರು.

ಯು. ಎನ್. ಐ. ಅಕ್ಟೋಬರ್ 7

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT